Koravanji

ಕೊರವಂಜಿ



ನವೆಂಬರ್ ೧೯೪೯

★

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು:

ಶ್ರೀ|| ಪಾ:ಟಾಳಿ

ಶ್ರೀ||. ರೇವಣ್ಣ

ಶ್ರೀ|| ಗಂಗಾಧರ

ಶ್ರೀ|| ಟಿ. ಸುನಂದಾ

ಶ್ರೀ|| ಚೇಚು

ಶ್ರೀ|| ದಾಶರಥಿ ದೀಕ್ಷಿತ್

ಶ್ರೀ|| ಟೀಯಸ್ಸಾರ್ರಾವ್

ಶ್ರೀ|| ಮಂದಕರಿನಾಯಕ

ಶ್ರೀ|| ಶಿವು

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

Do you believe that the best in quality is the most economical?

If so, for your requirements in patent medicines, Hospital requisites, Medicinal Toilets, Infant foods, etc.,

You can always

DIAL 3070 OR 2870

OR

CALL AT

Popular Pharmacy

(On the approved list of Govt. of Mysore)

WHOLESALE AND RETAIL

CHEMISTS AND DRUGGISTS

(Near Movieland Talkies)

Subedar Chatram Road : : Bangalore City

Branch at :-

6TH CROSS, SAMPIGE ROAD

MALLESWARAM

PHONE 2870


FAS. 4 87
Silky Soft
and luxuriant
HAIR !
RAJA
(TRADE MARK)
HAIROIL
The Best Brain & Hair Tonic
MANUFACTURERS
MANYAM & CO BANGALORE
RAJA HAIR OIL
MANYAM & CO. Bangalore, Madras, Madura, Bombay.


ಬಾರ್ಲೀ ನೀರನ್ನೂ, ಗಂಜಿಯನ್ನೂ ಈ ರೀತಿ ಮಾಡುವುದು ಸುಲಭ



ಬಾರ್ಲೀ ನೀರು: ತಲೆ ಸವರಿ 2 ಚಂಚಾಗಳಷ್ಟು ಪ್ಯೂರಿಟೀ ಬಾರ್ಲೀಗೆ ನೀರು ಸೇರಿಸಿ ಅಂಟಾಗಿ ಕಲಸಿ, ಒಂದು ಪೈಂಟು ನೀರು ಬೆರಸಿ, 5 ನಿಮಿಷಗಳ ವರೆಗೆ ಮಾತ್ರ ಕುದಿಸಿರಿ. ಉಪ್ಪು, ಸಕ್ಕರೆ ಅಥವಾ ನಿಂಬೆಯ ರಸವನ್ನು ನಿಮ್ಮ ನಿಮ್ಮ ರುಚಿಗೆ ತಕ್ಕಂತೆ ಸೇರಿಸಿಕೊಳ್ಳಿರಿ.

ಗಂಜಿ: ಇದನ್ನು ಸಾಧಾರಣ ರೀತಿಯಲ್ಲೇ ಮಾಡಿರಿ. ಆದರೆ, ಇದನ್ನು ಮಾಡಲು ಇಪ್ಪತ್ತೇ ನಿಮಿಷಗಳು ಬೇಕಾಗುವುವು.

ಒಂದು ಚಮಚಾದಷ್ಟು ಪ್ಯೂರಿಟೀ ಬಾರ್ಲೀಗೆ ಎಂಟು ಚಮಚಾಗಳಷ್ಟು ಸಾಧಾರಣ ಪರ್ಲ್ ಬಾರ್ಲೀ ಸಮಾನವಾದುದು.



ಅಟ್ಲಾಂಟಿಸ್ (ಈಸ್ಟ್) ಲಿಮಿಟೆಡ್, ಪೋ. ಬಾ. ನಂ. 664, ಕಲಕತ್ತ

APSK-6 KN

ಮನೆಗೆ ಕಾಂತಿ ! ಮನಕ್ಕೆ ಶಾಂತಿ !! ದೇಹಕ್ಕೆ ವಿಶ್ರಾಂತಿ !!!



ಕಣ್ಮನಗಳಿಗೆ ತಂಪು ಬೀರುವುದು,
ದೇದೀಪ್ಯಮಾನ


ಮೈಸೂರು ಬಲ್ಬು

ಅದು ಭಾರತದ್ದು ಸುಲಭ ಬೆಲೆಯದು!
ಹೆಚ್ಚು ಬಾಳಿಕೆ ಬರುವುದು !!
ಎಲ್ಲೆಲ್ಲೂ ದೊರೆಯುತ್ತೆ.

ಫೋನ್: 2026 ಗ್ರಾಮ್ಸ್: 'Mysorlamp'

ಮೈಸೂರು ಲ್ಯಾಂಪ್ ವರ್ಕ್ಸ್ ಲಿ., ಮಲ್ಲೇಶ್ವರಂ, ಬೆಂಗಳೂರು-3

ಅತಿಶುಭ್ರ ಒಗೆ...



ಅಂದರೆ OK ಒಗೆಯೇ

ತಯಾರಿಸಿದುದು: ದಿ ಈಸ್ಟ್ ಏಷ್ಯಾಟಿಕ್ ಕಂಪೆನಿ (ಇಂಡಿಯಾ) ಲಿಮಿಟೆಡ್, ಮದರಾಸು.

EAZ 8 KN

ಜೀವ ವಿಮೆ

ಗಂಡನ ಕರ್ತವ್ಯವೂ
ಹೆಂಡತಿಯ ಹಕ್ಕೂ
ಮಗುವಿನ ಆವಶ್ಯಕತೆಯೂ

ಆಗಿದೆ

ಮೈಸೂರು ಸರ್ಕಾರದ
- ವಿಮಾ ಇಲಾಖೆ -

ಮೂವತ್ತುಮೂರು ವರುಷಗಳ
ನಂಬಿಕೆ, ಸೇವೆ, ಸಹಕಾರ

ಸಲ್ಲಿಸಿದೆ

★

ಪೂರ್ಣ ಭದ್ರತೆ—ತೀರ ಕಡಿಮೆ ವೆಚ್ಚ, ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ಸು ಹಂಚಿರುವುದು ! ಸಾಲಿಯಾನ ಸಾವಿರಕ್ಕೆ ಹದಿನೆಂಟು ರೂಪಾಯಿ, ಅತ್ಯನುಕೂಲವಾದ ಪ್ರೀಮಿಯಂ ದರ—ಸುಲಭವಾದ ಸಾಲದ ಸೌಕರ್ಯ, ತಡವಿಲ್ಲದ ವಿಮಾ


– – – – ಮೊಬಲಗಿನ ಪಾವತಿ – – – –

★

ಪ್ರಜೆಗಳ ಶಾಖೆಯಲ್ಲಿ ವಿಮೆ ಮಾಡಲು ಇಂದೇ ನಿರ್ಧರಿಸಿರಿ.

★

ಮೈಸೂರು ಸರ್ಕಾರದ ವಿಮಾ ಇಲಾಖೆ,
ಬೆಂಗಳೂರು.



ಸಂಪುಟ ೯ | ನವಂಬರ್ ೧೯೪೯ | ಸಂಚಿಕೆ ೮

★★

ಕುಹಕಿಡಿಗಳು

★★

·ಕೊಡಗಿನ ಅರಣ್ಯದಲ್ಲಿ ಸಿಕ್ಕಿದ 'ಬಿಳೀ ಆನೆಯೊಂದನ್ನು' ಮೃಗಾಲಯದಲ್ಲಿ ಇಡುತ್ತಾರಂತೆ.

—ಈ ಸುದ್ದಿ ಶ್ರೀ ವಿ. ಪಿ. ಮೆನನ್ ರವರಿಗೆ ತಿಳಿಸಬಾರದು.

* * *

ರೂಪಾಯಿನ ಇಳಿತಾಯವಾದಾಗ ಸೀಮೆಯಿಂದ ಬಂದ ವಸ್ತುಗಳ ಮಾರಾಟವನ್ನು ತಾತ್ಕಾಲಿಕವಾಗಿ 'ಥಂಡ' ಮಾಡಿತು ಸರ್ಕಾರ.

—ನಮ್ಮ ಉತ್ಸಾಹಶಾಲಿ ಅಧಿಕಾರಿಗಳು–ಸೀಮೆ ಬದನೆಕಾಯಿ ವ್ಯಾಪಾರವನ್ನೂ ಜರೂರಾಗಿ ಥಂಡ ಮಾಡಿಸಿದರು ಎಂದು ಚಿರಂಜೀವಿಯೊಬ್ಬನು ಬರೆದಿದ್ದಾನೆ.

* * *

ಹುಚ್ಚನ ಮದುವೆ ನ್ಯಾಯಬದ್ಧವಾದುದೇ ಎಂಬ ಪ್ರಶ್ನೆ ಫೆಡರಲ್ ಕೋರ್ಟಿನ ಮುಂದಿದೆಯಂತೆ.

—ಹುಚ್ಚಲ್ಲದಿದ್ದರೆ ಮದುವೆ ತಾನೆ ಯಾಕೆ ಮಾಡಿಕೋತಾರೆ ?

* * *

ಕನ್ನಡ ಟೈಪ್‌ರೈಟರುಗಳಲ್ಲಿ ನಿಮಿಷಕ್ಕೆ ಅರವತ್ತು ಶಬ್ದಗಳನ್ನು ಟೈಪ್ ಮಾಡಬಹುದಂತೆ.

—ನಿಮಿಷಕ್ಕೆ ಅರವತ್ತು ಇಂಗ್ಲೀಷ್ ಶಬ್ದಗಳನ್ನೂ ಕನ್ನಡಕ್ಕೆ ತರ್ಜುಮೆ ಮಾಡಿಹೇಳುವ ಗ್ರಂಥಕರ್ತರು ಬೇಕು, ಈಗ,

*　　　*　　　*

ಕುಮಾರಿ........ಯವರು ಅಂತರಾಷ್ಟ್ರೀಯ ವ್ಯಾಯಾಮ ಸಮ್ಮೇಳನದಲ್ಲಿ ಲಟ್ಟಣಿಗೆ ಎಸೆಯುವುದರಲ್ಲಿ ಪ್ರಥಮಸ್ಥಾನ ಪಡೆದಳಂತೆ.

—ಕುಮಾರಿ !! ಸಂಸಾರದ ಅನುಭವವಿಲ್ಲದೇ ಇಷ್ಟು ಪ್ರಚಂಡ ಶಕ್ತಿ ಗಳಿಸಿರುವುದು ಅತ್ಯಾಶ್ಚರ್ಯ !

*　　　*　　　*

ಕನ್ನಡ ಮಾಸಪತ್ರಿಕೆಗಳನ್ನು ಕ್ರಿಸ್ತಶಕದ ರೀತ್ಯಾ ಮೊದಲನೆ ತಾರೀಖಿಗೆ ಏಕೆ ಪ್ರಚುರ ಪಡಿಸುತ್ತೀರಿ–ಪ್ರತಿ ಪಾಡ್ಯಕ್ಕ್ಯೂ ಏಕೆ ಹೊರಡಿಸುವುದಿಲ್ಲ? ಎಂದು ಓದುಗರೊಬ್ಬರು ಬರೆದಿದ್ದಾರೆ.

—ಅಧಿಕ ಮಾಸದ ಭಯದಿಂದ-ಈ ದುರ್ಭಿಕ್ಷದಲ್ಲಿ !

*　　　*　　　*

ಪದಗಳನ್ನು ಹಾಡಿದರೆ ನಾಯಿಗಳಿಗೆ ಕೋಪೋದ್ರೇಕ ಆಗುತ್ತದೆ ಎಂದು ವೈಜ್ಞಾನೀಕರು ಹೇಳಿದ್ದಾರೆ.

—ಭಿಕ್ಷುಕರೆಲ್ಲರಿಗೂ ಇದು ಎಂದೋ ಗೊತ್ತಿತ್ತು !

*　　　*　　　*

ಪಂ|| ನೆಹ್ರೂ ಅವರು ಕಾಮನ್‌ವೆಲ್ತ್‌ನಲ್ಲಿ ಇರುತ್ತಾರೆಂಬ ಸುದ್ದಿಯನ್ನು ಚರ್ಚಿಲ್ಲರಿಗೆ ಹೇಳಿದಾಗ.. ....ಆತ ಕಣ್ಣೀರು ಸುರಿಸುತ್ತಾ ತಾನು ಅವರನ್ನು ಸೆರೆಮನೆಗೆ ಹಾಕಿದ್ದು ನೆನೆದು, ಅಂದನಂತೆ—"ಅಷ್ಟು ದೊಡ್ಡಮನುಷ್ಯತ್ವ ನನಗೆ ಇದ್ದಿಲ್ಲ" ಎಂದು

—ಅದೂ ಒಂದು ದೊಡ್ಡತನವೇ ಅಲ್ಲವೇ ?

*　　　*　　　*

ತಾತ ಅವರ ಲಾಭ ಹಂಚಿಕೆ ವ್ಯವಸ್ಥೆ
ಶಿರೋನಾಮೆ

—ತಾತನ ಲಾಭವನ್ನು ತಂದೆಯೇ ಹಂಚಿಕೊಂಡ ಅನೇಕ ನಿದರ್ಶನ ಗಳು ನಮಗೆ ತಿಳಿದಿವೆ.

*　　　*　　　*

ಉ ರಿ ಗಾ ಳು

— ೧ —

ಕೆಲಸದಿಂದ ನಿವೃತ್ತರಾಗುವ ಮಂತ್ರಿಗಳಿಗೆಲ್ಲ ಪೆನ್‌ಷನ್ ಕೊಡಬೇಕೆಂಬ ನಿರ್ಣಯವನ್ನು ಮಹಾ ಸಭೆಯೊಂದರಲ್ಲಿ ಚರ್ಚೆಗೆ ಮಂಡಿಸಿದಾಗ, "ನಿವೃತ್ತರಾಗುವಾಗ ಪೆನ್‌ಷನ್ ಕೇಳುವ ಅನನುಭವಿ ದಡ್ಡರು ನಮಗೆ ಬೇಕಿಲ್ಲ" ಎಂದು ಒಬ್ಬರು ಟೀಕಿಸಿದರಂತೆ.

* * *

ಗಂಡನ ಕಾನ್ವೋಕೇಷನ್ ಫೋಟೋವನ್ನು ನೋಡಿ ಜ್ಞಾನ ತಪ್ಪಿ ಮೂರ್ಛೆ ಬಿದ್ದಳು. ಎಂದು ವರದಿಯಾಗಿದ್ದ ಸತಿಯನ್ನು ಈಗ ಆಸ್ಪತ್ರೆಗೆ ಸೇರಿಸಿರುವರಂತೆ,

* * *

ಇಂಡ್ಯಾದೇಶ ಯಾರಪಕ್ಷ ಸೇರಿ ಯುದ್ಧ ಮಾಡುತ್ತದೆ ಎಂಬುದು ನಿರ್ಧಾರವಾಗುವತನಕ ಮುಂದಿನ ಯುದ್ಧವನ್ನು ಮುಂದುವರಿಸಲಾಗುತ್ತದಂತೆ.

* * *

"ಒಂದು ಬಿಳಿ ಆನೆಗೆ ೧೦,೦೦೦ ರೂಪಾಯಿ"....ಅಂದರೆ, ಯಾವುದರ ಬೆಲೆ ಇಳಿದಿದೆ ? ರೂಪಾಯದೊ, ಬಿಳಿ ಆನೆಯದೊ ?

* * *

ಶ್ರೀರಂಗಪಟ್ಟಣದ ಕೋಟೆಯ "ಡಿಲ್ಲಿ ಗೇಟ್"ನ್ನು ಬೆಂಗಳೂರಿಗೆ ವರ್ಗಾಯಿಸುವ ಯೋಚನೆ ಇಷ್ಟರಲ್ಲೇ ಕಾರ್ಯರೂಪಕ್ಕೆ ಬರಬಹುದು.

* * *

ಸಕ್ಕರೆಯನ್ನು ಕಂಟ್ರೋಲ್ ಮಾಡಿ ಅದನ್ನು ಹಂಚಲು ಅವ್ಯವಸ್ಥೆ ಮಾಡಿದ್ದರಿಂದ ಅಕಸ್ಮಾತ್ ಲಾಭ ಪಡೆದವರೆಲ್ಲರೂ ಸೇರಿ, ಸಂಬಂಧಪಟ್ಟವರಿಗೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಲು ಯೋಚಿಸುತ್ತಿರುವರಂತೆ.

* * *

ಏಷ್ಯಾಖಂಡದ ವಯಸ್ಕರ ಶಿಕ್ಷಣಕ್ಕಾಗಿ ಮೈಸೂರಲ್ಲಿ ಒಂದು ಮಹಾ ಕಾರ್ಯಕ್ರಮವೇರ್ಪಟ್ಟಿದೆ. ಸಂಸ್ಥಾನದಿಂದಲೂ ಅಲ್ಲಿಗೆ ಮೂರು ನಾಲ್ಕು ಜನರನ್ನು ಕಳುಹಿಸುವರಂತೆ. ಈ ಸಂಖ್ಯೆ ತೀರ ಕಡಮೆ ಎಂಬುದೇ ನಮ್ಮ ಅಭಿಪ್ರಾಯ.

* * *

" ಯೂನಿಯನ್ ಕರ್ಣಾಟಕವು ಮೈಸೂರಿಗೆ ಸೇರಿದರಾಗಲಿ, ಮೈಸೂರು ಯೂನಿಯನ್ ಕರ್ಣಾಟಕಕ್ಕೆ ಸೇರಿದರಾಗಲಿ, ಯಾವ ವ್ಯತ್ಯಾಸವೂ ಆಗದು" (ರಾಜೇಂದ್ರ ಪ್ರಸಾದರು)....ಆದ್ದರಿಂದಲೇ, ಎರಡು ಕಡೆಯಲ್ಲೂ ತಾಟಸ್ಥ್ಯ.

*　　*　　*

" ಬೊಂಬೆಯಾಟವನ್ನು ಅಭಿವೃದ್ಧಿಗೊಳಿಸಲು ಹೊಸ ಹೊಸ ಬೊಂಬೆಗಳನ್ನು ಸರ್ಕಾರವು ಒದಗಿಸಿಕೊಡಬೇಕು" (ಷಾ.ಕೃ)........ಈ ರೀತಿಯ ಟೀಕೆ ಈಚೆಗೆ ಮಿತಿಮೀರಿಬಿಟ್ಟಿದೆ.

*　　*　　*

" ಹೈಸ್ಕೂಲ್ ತರಗತಿಗಳಿಗೆ ಕನ್ನಡ ಪಠ್ಯ ಪುಸ್ತಕಗಳಾಗಿ ನೇಮಿತವಾಗಿರುವ ಗ್ರಂಥಗಳು ಇನ್ನೂ ಅಚ್ಚಾಗಿ ಎಲ್ಲಕಡೆಗೂ ಬಂದಿಲ್ಲ"....ಇದರಿಂದ ವಿದ್ಯಾರ್ಥಿಗಳೂ ಉಪಾಧ್ಯಾಯರೂ ತುಂಬಾ ಹರ್ಷಿತರಾಗಿದಾರೆ.

*　　*　　*

ಮುಂದಿನ ವರ್ಷದವರೆಗೆ ಇನ್ನು ಗಾಂಧಿ ಜಯಂತಿಯನ್ನು ಆಚರಿಸಬೇಕಾಗಿಲ್ಲವೆಂದು ಕಾಂಗ್ರೆಸ್ ವಾತಾರಗಳಲ್ಲಿ ವದಂತಿ ಹಬ್ಬುತ್ತಿದೆ.

*　　*　　*

ಸಮಗ್ರ ಗ್ರಾಮಸೇವಾ ಸಹಕಾರ ಸಂಘಗಳಿಗೆ ತಮ್ಮನ್ನು ಕಾರ್ಯದರ್ಶಿಗಳಾಗಿ ಕೂಡಲೇ ನಿಯಮಿಸಿ ಉಪಕಾರ ಮಾಡಿಕೊಡಬೇಕೆಂದು ಪ್ರೈಮರಿ ಶಾಲಾ ಉಪಾಧ್ಯಾಯರು ಸರ್ಕಾರವನ್ನು ಬಿನ್ನವಿಸಿಕೊಂಡಿರುವರಂತೆ.

*　　*　　*

ಹಾರ ತುರಾಯಿ ಮಾಡುವವರ ಸಂಘದವರು, ಕೂಡಲೇ ಮಂತ್ರಿಮಂಡಲವನ್ನು ಬಡಾಯಿಸಿ, ಉಪ ಮಂತ್ರಿಗಳನ್ನು ನೇಮಿಸಿ, ಆಡಳಿತವನ್ನು ಇನ್ನೂ ವಿಸ್ತರಿಸಬೇಕೆಂದು ಠರಾವು ಮಾಡಿರುವರಂತೆ.

*　　*　　*

" ರಾತ್ರಿ ನಾವು ಮಲಗುವ ಹೊತ್ತಿಗೆ ಸರಿಯಾಗಿ ಅಮೇರಿಕಾದಲ್ಲಿ ಜನರು ಹಾಸಿಗೆಯಿಂದ ಏಳುತ್ತಿರುತ್ತಾರೆ" (ಪತ್ರಿಕೆ)....ಶುದ್ಧ ಶೋಂಭೇರಿಗಳು !

*　　*　　*

ನಿಮ್ಮ ಕಾಲೇಜಲ್ಲಿ ಎಷ್ಟು ವಿದ್ಯಾರ್ಥಿಗಳು ಓದುತ್ತಿದಾರೆ, ಎಂಬ ಪ್ರಶ್ನೆಗೆ ಪ್ರಿನ್ಸಿಪಾಲ್ ಮಹಾಶಯರು, 'ಹತ್ತರಲ್ಲೊಬ್ಬ" ಎಂದು ಉತ್ತರ ಕೊಟ್ಟರಂತೆ.

*　　*　　*

" ಇಂಡ್ಯಾದಲ್ಲಿ ಅಣುಬಾಂಬಿಲ್ಲ; ಅದಕ್ಕಾಗಿ ನಾನು ಸಂತೋಷಪಡುತ್ತೇನೆ" (ನೆಹರು) ಏಕೆಂದರೆ, ಇಲ್ಲಿ ಎಡಪಕ್ಷ ಬಲಪಕ್ಷ ಇಬ್ಬರೂ ಇದಾರೆ.

*　　*　　*

ಕೊರವನ ಸಿಂಹಾವಲೋಕನ

ಅಯ್ಯೋ! ಇದೊಂದು ಹೊಸ ಕಾರಣ ಸಿಕ್ಕಿತಲ್ಲಪ್ಪಾ! ಪಾಕಿಸ್ಥಾನಕ್ಕೆ ಯು. ನೋ. ವಿಗೆ ಆರು ಗಂಟೆ ಭಾಷಣ ಮಾಡಲು ಎಂದ ಕೊರವ "ತಾಯಿ ನಾಡು" ಪತ್ರಿಕೆಯನ್ನು ಮೇಜಿನ ಮೇಲೇರಿಸಿ, ಎಲಡಿಕೆ ಬುತ್ತಿಯನ್ನು ತೆಗೆಯುತ್ತಾ.

ನಾವೂ ಆ ದಿನದ "ತಾಯಿನಾಡು" ನೋಡಿದ್ದೆವು. ಪಾಕಿಸ್ಥಾನಕ್ಕೆ ಅನುಕೂಲವಾದ ಸುದ್ದಿ ಏನೂ ಕಂಡುಬಂದಿತಿಲ್ಲ. ನಮ್ಮ ಮುಖದ ನಾಮ ಗಳು ಹಾಗಿರಲಿ ಅಕ್ಷತೆ ಕೂಡ ಪ್ರಶ್ನಾರ್ಥ ಸಂಕೇತವಾಗಿದ್ದುವು.

ನಮ್ಮ ಹಣೆಗಳನ್ನು ನೋಡಿಯೇ ಕೊರವ ಹೇಳಿದ.

"ಓದಲಿಲ್ಲವೇ ಪತ್ರಿಕೆಯಲ್ಲಿ "ಘೋಷಾ" ಗಾಡಿಯಲ್ಲಿ ಹೋಗುತ್ತಿದ್ದವ ರನ್ನು ಹಿಡಿದು ತನಿಖೆ ಮಾಡಿ ಆ ಗಾಡಿಯಲ್ಲಿ ೭೨ ಸೇರು ಅಕ್ಕಿ ಮಾತ್ರ ಘೋಷಾವಾಗಿ ಸಾಗಿಸಲ್ಪಡುತ್ತಿತ್ತೆಂದೂ, ಇಬ್ಬರು ಸಾಬರು ಹೊರತಾಗಿ ಇನ್ಯಾರೂ ಇತ್ತಿಲ್ಲವೆಂದೂ ವರದಿಯಾಗಿದೆ. ಇದನ್ನೇ ಸರ್ ಮಹಮ್ಮದ್ ಜಫರುಲ್ಲಾ ಖಾನರು ಹಿಡಿದು, "ಎಲ್ಲಾ ಘೋಷಾ ಹೆಂಗಸರನ್ನೂ ಬಹಿರಂಗ ವಾಗಿ ಭಾರತದಲ್ಲಿ ತನಿಖೆ ಮಾಡುತ್ತಿದ್ದಾರೆ—ಹಿಂದೂಗಳಿಬ್ಬರೇ ಮುಸಲ್ಮಾನರ ಸೋಗಿನಲ್ಲಿ ಈ ರೀತಿ ಹಿಡಿಯಲ್ಪಟ್ಟಿರುತ್ತಾರೆ ಎಂದು ನಮಗೆ ಗೊತ್ತು" ಎಂದು ವಾದ ಹೂಡಿ ಯುನೋವಿನಲ್ಲಿ ಅಮೋಘ ಭಾಷಣ ಮಾಡುತ್ತಾರೆ."

ಹೌದಾ! ಅಂದು ಬೆರಳಿನ ಕೆಳಕ್ಕೆ ಮೂಗನ್ನು ಇಳಿಸಿದೆವು.

*　　*　　*

"ಲಿಯಾಖತ್ ಅಲಿ ಖಾನರ ಪುಣ್ಯವೇ ಪುಣ್ಯ" ಎಂದ ಕೊರವ. ಕುರ್ಜಿ ಮೇಲಿನ ಚಕ್ಕಳಿಮುಟ್ಟಿಗೆಯನ್ನು ಸಡಿಲಿಸುತ್ತಾ.

ನಮಗೆ ಆಶ್ಚರ್ಯ! ಆತನಿಗೆ ಆಕಡೆ ಆಫ್ಘಾನಿಸ್ಥಾನ, ಈಕಡೆ ಜಫರುಲ್ಲಾ ಖಾನ, ಮುಂಗಡೆ ಡಾಲರ—ಹಿಂಗಡೆ ರೂಪಾಯಿ, ಮೇಗಡೆ ಜಿನ್ನಾನಾಸ್ತಿ. ಭಾರತದಲ್ಲಿ ಅವನ ಆಸ್ತಿ ಪಾಸ್ತಿ. ಇವನಿಗೇನು ಪುಣ್ಯ ಅಂತ.

ನಾನು ತಡೆಯಲಾರದೆ ಒಂಟು ಸೀನು ಸೀತೆ.

ಆಗಂದ ಕೊರವ "ಅಮೇರಿಕಾದಲ್ಲಿ—ಕೆನಡಾದಲ್ಲಿ ನಮ್ಮ ನೆಹ್ರೂಗೆ ಆಗಿದ್ದು ಕೇಳಿದಿರಾ! ಏನು ಸ್ವಾಗತ. ಏನು ಮೆರವಣಿಗೆ. ಏಂಥಾ ವಿಜಯ ದಶಮಿ!!! ಹತ್ತೊಂಭತ್ತು ಗುಂಡುಗಳು. ಹಾದಿ ತುಂಬ ಪೋಲೀಸರು.—ಕೂರಲು ಕಿಟಕಿ ಅಂಚು. ನಿಲ್ಲಲು ಮೇಲ್ಚಾವಣಿ. ಭಾಷಣ ಮಾಡಿದರೆ, ರೇಡಿಯೋ ಸರಮಾಲೆ.

ಇದೆಲ್ಲಾ ರಷ್ಯಾಕ್ಕೆ ಗೊತ್ತಿಲ್ಲವೇ? ಚಿಕ್ಕಪ್ಪ ಸ್ಟಾಲಿನ್ ಸುಮ್ಮಗಿರುತ್ತಾನೆಯೇ! ಅಣು ಬಾಂಬು ಹೂಡಿದ ಸ್ಟಾಲಿನ್ ಮಂಕೇ. ಇದರ ಸೇಡೆಲ್ಲಾ ಲಿಯಾಖತ್ ಆಲಿಖಾನನ ಮೇಲೆ ತೀರಿಸಿಕೊಳ್ಳದೇ ಬಿಡುತ್ತಾನೆಯೇ.

ಅವನ ಪುಣ್ಯವೇ ಪುಣ್ಯ ಎಂದ!

* * *

"ಮಹಾತಾಯಿ ಸೀತಾದೇವಿ ರಾವಣನ ಉದ್ಯಾನವನದಲ್ಲಿ ಸೆರೆ ಇದ್ದಾಗ ಒಂದು ಮರದ ಕೆಳಗೆ ಅಹೋ ರಾತ್ರಿ ಅಳುತ್ತಾ ಕೂತಿದ್ದಳು. ಆ ಮರದ ಹೆಸರು ಗೊತ್ತೆ" ಎಂದ ಕೊರವ.

ಅವನು ಕೇಳುವ ಪ್ರಶ್ನೆಗಳೇ ಹೀಗೆ—ಸಿಡಿಲು ಬಡಿದ್ದಾಗೆ.

ಒಕ್ಕೊರಲಿನಿಂದ "ಅಶೋಕ" ಎಂದೆವು ಎಲ್ಲರೂ.

"ಅಷ್ಟಾದರೂ ಗೊತ್ತಿದೆಯಲ್ಲಾ! ಶೋಕ ತುಂಬಿದ ಮರದ ಹೆಸರು ಅ–ಶೋಕ. ಅದೇ ಚಿಹ್ನೆಯನ್ನು ನಮ್ಮ ದೇಶದ ಗುರುತಾಗಿ ತೊಗೊಂಡಿದರಲ್ಲಾ—ಅ–ಶೋಕ ಚಕ್ರ!—ಅದರಡಿ ನಮಗೆ ಸೀತಾದೇವಿಯ ಪಾಡೇ ತಾನೇ" ಎಂದೇ ಬಿಟ್ಟ ಕೊರವ.

ಶೋಕಜೀವನ ನಡೆಸಿದ—ನಡೆಸುತ್ತಿರುವ—ನಮಗೆ ಮಾತೃಭೂಮಿಯ ಮಮತೆ—ಅಲ್ಲಾ! ಎಂದು ಹೇಳಗೊಡಲಿಲ್ಲ.

* * *

ಕವಿಯಂತೆ—ಕವಿ ಸಾರ್ವಭೌಮನಂತೆ. ಯಾರು ಬೇಕಾದರೂ ಪದ್ಯ ಬರೆಯಬಹುದು ಬಿಡುವಿದ್ದರೆ—ಎಂದ ಕೊರವ, ಕೆಮ್ಮುತ್ತ.

—"ಎಲ್ಲಿ ಹಾಗಾದರೆ ಒಂದು ಆಶು ಕವಿತೆ ಅಪ್ಪಣೆ ಕೊಡಿಸಿ, ಈಗ ಬಿಡುವಾಗಿದ್ದೀರಲ್ಲ" ಎಂದೆ ಅಚಾತುರ್ಯದಿಂದ.

ಕೇಳಿ! ಕೇಳಿ! ಹಾಗಾದರೆ, ಎಂದು ಒಂದು ಪದ್ಯ ಪಲುಕೇಬಿಟ್ಟ ಕೊರವ.

'ಪರಸ್ಪರ' ಅಂತ ಶಿರೋನಾಮೆ.
ಎಲ್ಲೋ! ನೋಡಿದ ಹಾಗಿದೆಯಲ್ಲಾ
ನಿಮ್ಮನ್ನ.
ಚೆನ್ನಾಗಿ ಜ್ಞಾಪಕ ಇದೆ—ಮುಖ.
ಆದರೆ ಹೆಸರೇ??........ಮರೆತೆ.
ಎಲ್ಲೋ! ನೀವು ಒಮ್ಮೆ
ವಿಷ ಕುಡಿಸಿದ ನೆನಪಿದೆ—
ಯಾವಾಗ? ಹೆಸರೇನು? ಹೆ....ಸ....ರು?
—ಅಯ್ಯೊ! ತಾಳಿ. ನನಗೆ ನೆನಪಾಯ್ತು.
ನೀವೇ ಅಲ್ಲವೇ? "ಸತ್ಯ!"
ನಾನು "ರಾಜಕೀಯ" ನೆನಪಾಯ್ತೆ?

ಹೇಳಿದವನೇ ಹೊರಟೇ ಹೋದ ಕೊರವ. ಒಂದು ವಾರದಿಂದಲಾದರೂ ಇದನ್ನು ಬರೆದಿದ್ದಿರಬೇಕು ಎನ್ನಿಸಿತು.

* * *

———o———

ಜ|| ಡೆಲ್ವಾಯ್ ಕೆಲಸಕ್ಕೆ ರಾಜೀನಾಮೆ ಕೊಡುತ್ತಾರೆಂಬುದನ್ನು ಕೇಳಿ ಯೂ.ನೋ.ದ ಅನೇಕ ಅಧಿಕಾರಿಗಳು ಆ ಕೆಲಸಕ್ಕೆ 'ಟೆಂಡರ್' ಹಾಕಿದ್ದಾರೆಂಬುದು ಸುಳ್ಳಂತೆ.—

* * *

ಮೃಗಾಲಯದ ಜಾರುವ ಬಂಡೆಯಮೇಲೆ ಹಲವು ಪ್ರ. ಪ್ರತಿನಿಧಿಗಳು ಆಟವಾಡಿದರಂತೆ.

—ಬಂಡೆ ಮೇಲೆ ಜಾರೋದೇನು ಮಹಾ! ಹೇಳಿದ ಮಾತುಗಳಿಂದಲೂ ಜಾರೋ ಅಭ್ಯಾಸವಿದ್ದವರಿಗೆ.

* * *

ಕನ್ನಡದ ಸೋಗು

ಕನ್ನಡವನುಳಿದೆನಗೆ ಅನ್ಯಜೀವನವಿಲ್ಲ,
ಕನ್ನಡವೆ ತಾಯ್ತಂದೆ ಕನ್ನಡವೆ ತೀರ್ಥ !
ಕನ್ನಡವೆ ಧನಧಾನ್ಯ ಕನ್ನಡವೆ ಸ್ವರ್ಗ—
"ಕನ್ನಡಿಗರೊಕ್ಕೂಟ—ಅದು ಮಾತ್ರ ಬೇಡ"

ಕನ್ನಡವೆ ಸವಿಜೇನು ಕನ್ನಡವೆ ಕತ್ತುರಿಯು,
ಕನ್ನಡವೆ ಸರಸತಿಯು ಕನ್ನಡವೆ ಲಕ್ಷ್ಮೀ !
ಕನ್ನಡದ ಮನೆ ಮಠವೆ ಚಿನ್ನರನ್ನದರಾಶಿ—
"ಕನ್ನಡಿಗರೊಕ್ಕೂಟ—ಅದು ಮಾತ್ರ ಬೇಡ"

ಕನ್ನಡವೆ ಸಿರಿ ಪೆಂಪು ಕನ್ನಡವೆ ಎದೆಗಿಂಪು,
ಕನ್ನಡದ ಎದೆ ಹಾಲು ಬೆಲೆಯೆ ಇಲ್ಲದ ಮಾಲು !
ಕನ್ನಡದ ಸ್ಫೂರ್ತಿಯೇ ಎನ್ನ ಕೀರ್ತಿಯ ಬೇರು—
"ಕನ್ನಡಿಗರೊಕ್ಕೂಟ—ಅದು ಮಾತ್ರ ಬೇಡ"

ಕನ್ನಡದ ಜನಕುಲವು ಎನ್ನ ನಂಟರ ಬಳಗ,
ಕನ್ನಡದ ಓನಾಮ ಎನ್ನ ಹಣೆಬರಹ !
ಕನ್ನಡದ ಮೇಲ್ಮೆಯೇ ಎನ್ನ ತಾಯ್ ಪೆರ್ಮೆ—
"ಕನ್ನಡಿಗರೊಕ್ಕೂಟ—ಅದು ಮಾತ್ರ ಬೇಡ"

— ಪಾಟೀಲ.

ವರದಿ

ಕೇಂದ್ರಸರ್ಕಾರದ ಮಂತ್ರಿಗಳು ತಮ್ಮ ಸಂಬಳವನ್ನು ಶೇಕಡ ೧೫ ರಷ್ಟು ಕಡಿಮೆ ಮಾಡಿಕೊಂಡಿರುವುದರಿಂದ ಪ್ರಾಂತ ಪ್ರಾಂತದಲ್ಲೂ ಮಂತ್ರಿಗಳಿಗೂ ಉನ್ನತಾಧಿಕಾರಿಗಳಿಗೂ ತಲೆ ಸಿಡಿತ ಪ್ರಾರಂಭವಾಗಿದೆ. ಆದರೆ, ಅವರಲ್ಲೊಬ್ಬರು, ತಾವೂ ಮಹಾನಾಯಕರ ಪಥವನ್ನೇ ಹಿಡಿದು ದೇಶವನ್ನು ಉಳಿಸಲು ಸಂಕಲ್ಪ ಮಾಡಿಬಿಟ್ಟಿದಾರಂತೆ. ಎಲ್ಲಕ್ಕಿಂತ ಮೊದಲು, ಅವರು ತಮ್ಮ ಗೃಹಿಣಿ ಅತ್ತೆ ಅಕ್ಕ ಮುಂತಾದ ಮಹಿಳೆಯರನ್ನೆಲ್ಲ ಸೇರಿಸಿ ಸಭೆ ಕೂಡಿಸಿ ಶೇಕಡ ೧೫ ರ, ಖರ್ಚನ್ನು ಹೇಗೆ ಉಳಿಸುವುದು, ಯಾವ ಯಾವ ಬಾಬನ್ನು ಖೋತಾ ಮಾಡುವುದು, ಎಂದು ಚರ್ಚೆ ಮಾಡಿದರಂತೆ.

ತಮ್ಮ ಬಂಗಲಿ ಅಂಗಳದಲ್ಲಿ ಸರ್ಕಾರಿ ಜವಾನರಿಂದ ತರ್ಕಾರಿ ಬೆಳೆಸಿ ಮಾರುವುದು, ಕಚೇರಿ ವ್ಯಾನಲ್ಲೇ ಮಕ್ಕಳನ್ನು ಸ್ಕೂಲಿಗೆ ಕಳುಹಿಸುವುದು, ಸಂಗೀತ ಬಲ್ಲ ಗುಮಾಸ್ತೆ ಒಬ್ಬರಿಂದಲೇ ಹೆಣ್ಣುಮಕ್ಕಳಿಗೆ ಸಂಗೀತ ಪಾಠ ಕಲಿಸುವುದು. ಮನೆಗೆ ಬೇಕಾದ ಸೌದೆಯನ್ನು ಅರಣ್ಯ ಇಲಾಖಾಧಿಕಾರಿಗಳ ಮೂಲಕ ತರಿಸಿಕೊಳ್ಳಲು ಪ್ರಯತ್ನಿಸುವುದು, ವಿದ್ಯುಚ್ಛಕ್ತಿ ಸರಬರಾಯನ್ನು ಉಚಿತವಾಗಿ ಪಡೆಯುವುದು, ಉದ್ಯಾನ ಇಲಾಖೆಯವರೇ ಬಂದು ಮನೆ ಉದ್ಯಾನವನ್ನು ಏರ್ಪಡಿಸುವಂತೆ ಬಲವಂತ ಪಡಿಸುವುದು, ರೈಲು, ಬಸ್ಸು ಇತ್ಯಾದಿಗಳಲ್ಲಿ ಮನೆಯವರಿಗೆಲ್ಲ ಉಚಿತ ಪ್ರಯಾಣ ದೊರಕುವಂತೆ ಅವರಿವರನ್ನು ಕಂಡು ಕಲ್ಪಿಸಿಕೊಳ್ಳುವುದು, ಎಲ್ಲ ಸಿನಿಮ ಮಂದಿರಗಳಿಂದಲೂ ಕಾಂಪ್ಲಿಮೆಂಟರಿ ಟಿಕೇಟುಗಳನ್ನು ಸಂಪಾದಿಸುವುದು, ಎಂದು ಮುಂತಾಗಿ ಸಲಹೆಗಳು ಬಂದುವು.

ಆದರೆ, ಆ ಮಹಿಳಾ ಸಭೆಯ ಅಧ್ಯಕ್ಷನಾಗಿದ್ದ ಮಹನೀಯರು ಹೇಳಿದನಂತೆ: "ಇವೆಲ್ಲವೂ ಈಗಾಗಲೇ ಜಾರಿಗೆ ಬಂದಿರುವ ಉಪಾಯುಗಳು. ಈಗ ನಮಗೆ ಬೇಕಾಗಿರುವುದು, ಖರ್ಚನ್ನು ಇನ್ನೂ ಕಡಮೆ ಮಾಡುವ ವಿಧಾನಗಳು" ಎಂದರಂತೆ. ಮತ್ತೆ. ಒಂದೆರಡು ಗಂಟೆಗಳ ಚರ್ಚೆ ನಡೆದನಂತರ, ತಮ್ಮ ಸಂಬಳವನ್ನು ಶೇಕಡ ೨೫ ರಷ್ಟು ಹೆಚ್ಚಿಸಲು ಪ್ರಯತ್ನಿಸಬೇಕೆಂದೂ, ಅನಂತರ ಅವರು ಪುನಃ ಶೇಕಡ ೧೫ ರಷ್ಟು ಇಳಿಸಲು ಒಪ್ಪಿಕೊಳ್ಳಬಹುದೆಂದೂ ತೀರ್ಮಾನಿಸಲಾಯಿತಂತೆ.

ನೆರೆಯಾತನ ಮೊರೆ

ಅಕ್ಕ ಪಕ್ಕ ಅಂದರೆ ಸ್ನೇಹ, ಸೌಹಾರ್ದ, ಸಾಲ ಕೊಡೋದು ಬಿಡೋದು ಇರಲೇಬೇಕಲ್ಲ. ನನಗಂತೂ ಹಾಗೆಯೇ ಇತ್ತು. ನನ್ನ ಪಕ್ಕದ ಮನೆಯವರೂ ನನ್ನಂತೆಯೇ. ಅವರ ಹುಡುಗರು ನಮ್ಮ ಮನೆ ಸೀಬೆಕಾಯಿ ಮರದ ಮೇಲೇರುವುದು, ನಮ್ಮ ಹುಡುಗರು ಅವರ ನಾಯಿ ಬಾಲ ಎಳೆಯುವುದು--ಹೀಗೆ ಆಟ ಪಾಟ ಕಾಟ, ದಿನವೂ! ಜಾತಿಯಲ್ಲ, ಜನವಲ್ಲ, ಆದರೂ ಸ್ನೇಹ.

ಒಂದು ದಿನ ಇದ್ದಕ್ಕಿದ್ದ ಹಾಗೆ, ಪಕ್ಕದ ಮನೆಯಿಂದ "ಅಯ್ಯೋ! ಕಳ್ಳ! ಕಳ್ಳ! ಖೂನಿ! ದರೋಡೆ!" ಎಂಬ ಆರ್ತನಾದ ಕೇಳಿ ಬಂತು. ಎದೆ ಜಗ್ ಎಂದಿತು. ನಾನೂ ನಮ್ಮ ಮನೆಯಲ್ಲಿರೋ ನಮ್ಮ ಹುಡುಗರು, ಅಳಿಯಂದಿರು, ಆಳುಗಳು ಓಡಿದುವು ಅಲ್ಲಿಗೆ. ದರೋಡೆಕಾರರು ಹಿತ್ತಲ ಬಾಗಿಲಿಂದ ನುಗ್ಗಿ, ಊಟದ ಕೋಣೆ ಹಾದು ದೇವರ ಮನೆ ಲೂಟಿಮಾಡಿ, ಉಗ್ರಾಣಕ್ಕೆ ನುಗ್ಗಿದ್ದರು. ದಾರಿಯಲ್ಲಿ ಮಲಗಿದ್ದ ಮಕ್ಕಳನ್ನು ತುಳಿದು ಕೆಡವಿದ್ದರು. ಸದ್ಯಃ, ನಾವು ಅಲ್ಲಿಗೆ ಸೇರುತ್ತಲೂ, ಅತ್ತಕಡೆ ಇತ್ತಕಡೆ ನಿಂತಿದ್ದ ನಾಲ್ಕೈದು ಪುಂಡರು ಕಾಲಿಗೆ ಬುದ್ಧಿ ಹೇಳಿ, ಕಾಂಪೌಂಡ್ ಗೋಡೆ ಹಾರಿ, ಅದರಾಚೆ ಮನೆ ಹಿತ್ತಲಲ್ಲಿ ಅವಿತುಕೊಂಡರು. ಪಕ್ಕದ ಮನೆಯಲ್ಲಿದ್ದ ಕಳ್ಳರೆಲ್ಲ ಅವರ ಉಗ್ರಾಣದೊಳಕ್ಕೆ ನೇರಿಕೊಂಡು ಬಾಗಿಲು ಚಿಲಕ ಎಳೆದರು. ನಾವು ಈಚೆಗೆ ಒಂದು ಬೀಗ ತಗುಲಿಸಿದೆವು.

"ಇದೀಗ ಭದ್ರ!" ಎಂದು ನಾವು ಪೋಲೀಸರಿಗೆ ತಿಳಿಸಿದೆವು. ಅವರೂ ಬಂದರು. ಆದರೆ, ಬೀಗ ತೆಗೆದು ಬಾಗಿಲು ತಟ್ಟಿ ಚಿಲುಕ ಕಳಚಿ ಒಳಗಿದ್ದ ಕಳ್ಳರನ್ನು ಎಳೆದು, ಅವರು ಲಾಕಪ್ಪಿಗೆ ಕರೆದುಕೊಂಡು ಹೋಗಲೇ ಇಲ್ಲ. ಉಗ್ರಾಣದ ಆಚೆಗಿದ್ದ ಕಿಟಕಿಯಿಂದ, ಅವರು ಕಳ್ಳರ ಕೈಲಿ ಮಾತು ಪ್ರಾರಂಭ ಮಾಡಿದರು. ಯಾರು ನೀವು, ಯಾಕೆ ಬಂದಿರಿ ಇಲ್ಲಿಗೆ, ಯಾವ ಹೊತ್ತು ಹೊರಡುತ್ತೀರಿ, ಊಟವಾಯಿತೆ—ಎಂದೆಲ್ಲ ಕೇಳಿದರು. ಅವರಿಗೂ ಧೈರ್ಯವಾಯಿತು. ಆಡುತ್ತ ಆಡುತ್ತ, ಮಾತು ಸರಸಕ್ಕೆ ತಿರುಗಿತು. "ಈ ಮನೆಯವರಿದಾರಲ್ಲಾ, ಇವರು ನಮ್ಮ ಜನ; ಈ ಮನೇನೂ ಇವರ ತಾತನ ಕಾಲದಿಂದ ನಮಗೇ ಸೇರಬೇಕಾದದ್ದು; ಇಲ್ಲಿ ಇವರು ಶೇಖರಮಾಡಿರೋ ಧನಧಾನ್ಯ ಎಲ್ಲಾ

ಒಂದು ರೀತಿಯಲ್ಲಿ ನಮ್ಮದೇನೇ; ನಾವು ಮನಸ್ಸು ಮಾಡಿದ್ದರೆ, ಇವರನ್ನ ಮಣ್ಣು ಮುಕ್ಕಿಸಬಹುದಾಗಿತ್ತು; ಆಚೆಮನೆಯವರನ್ನು ಆಚೆಗೆ ಓಡಿಸಿ, ನಮ್ಮನ್ನ ಹೊರಕ್ಕೆ ಕರೆದು ಈ ಮನೇಲೇ ಕೂರಿಸಿ ಪುರಸ್ಕರಿಸಿ, ಪೋಲೀಸಿನವರೇ!” ಎಂದು ಆ ಕಳ್ಳರ ಮುಖಂಡ ಹೇಳಿದ.

ಪೋಲೀಸಿನವರು ಪಾಪ ಮಂಕರು. ಯಾರು ಏನಂದರೂ, ಹಂಗಾ, ಹಿಂಗಾ ಎಂದು ಹೂಂಗುಟ್ಟುವವರು. ಆದರೂ “ನಿಮಗೆ ಸೇರಬೇಕಾದ ಧನ ಧಾನ್ಯಾನ ನೀವು ಬಾಗಿಲು-ಹಾಕಿಕೊಂಡು ಮುಕ್ಕುತ್ತಿದ್ದರೆ, ಈ ಅಯ್ಯ ಏಕೆ ಹೀಗೆ ದೊಣ್ಣೆ ತಿರುವಿಕೊಂಡು ಇಲ್ಲಿಗೆ ಬಂದ? ಈ ಮನೆಯವರ್‍ಯಾಕೆ ಅಯ್ಯೋ ಅಂತ ಕೂಗಿಕೊಂಡರು?” ಎಂದರು. ನನ್ನನ್ನೇ ದುರುಗುಟ್ಟಿ ನೋಡಿದರು.

ಅದಕ್ಕೆ ಆ ಮುಖಂಡ, “ತಾಳ್ರಪ್ಪ! ಎಲ್ಲಾನೂ ವಿಶದವಾಗಿ ಹೇಳ್ತೀವೆ; ಮೊದಲು ಬಾಗಿಲು ತೆಗೆಯಿರಿ! ಆ ಮೇಲೆ, ನಿಮ್ಮ ಈ ಕಾನ್ಸ್ಟೇಬಲ್ಲುಗಳನ್ನೆಲ್ಲ ಹಿಂದಕ್ಕೆ ಕಳುಹಿಸಿ;” ಎಂದರು. “ಎಲ್ಲಾದರೂ ಉಂಟೆ?” ಎಂದು ನಾನು ಮೂಗಿನ ಮೇಲೆ ಬೆರಳಿಟ್ಟೆ. ಆದರೂ, ಆ ಪೋಲೀಸಪ್ಪ ಹಾಗೆ ಮಾಡೇಬಿಟ್ಟ.

ನನ್ನ ನೆರೆಮನೆಯಾತ ಮಾತ್ರ, ನನ್ನ ಬೆನ್ನ ಹಿಂದೇನೆ ನಿಂತಿದ್ದ., ಗಡಗಡ ನಡುಗುತ್ತಿದ್ದ. ಅತ್ತಕಡೆ ಕಾಂಪೌಂಡು ಗೋಡೆ ಬುಡದಲ್ಲಿ ಕುಳಿತಿದ್ದ ಪುಂಡರ ತಂಡದ ಕಡೆ ಕೈ ತೋರಿಸುತ್ತಲೇ ಇದ್ದ. ನನಗೆ, ಅಯ್ಯೋ ಪಾಪ, ಎನಿಸಿತು. ಆಗ ಆ ಪೋಲೀಸಪ್ಪನಿಗೆ ನಾನಂದೆ, “ದಮ್ಮಯ್ಯ, ನೀನು ಈ ದರೋಡೆಕಾರರನ್ನ ಮೊದಲು ಬಳೆ ತೊಡಿಸಿ ಕರೆದುಕೊಂಡು ಹೋಗು ಠಾಣೆಗೆ!” ಅದಕ್ಕವನಂದ, “ನೀವು ಹೇಳೋದು ನ್ಯಾಯವಾಗಿದೆ; ಇವರು ಹೇಳೋದು ನ್ಯಾಯವಾಗಿದೆ. ಮುಂದಿನ ಬಾಗಿಲಿಂದ ಬಂದ ನೀವೂ ಗೃಹಸ್ಥರು; ಹಿತ್ತಲ ಬಾಗಿಲಿಂದ ಬಂದ ಈ ಮಹನೀಯರುಗಳೂ ಸಭ್ಯರು. ನನಗೆ ಬುದ್ಧೀನೇ ಓಡೋದಿಲ್ಲ. ನಾನು ಬಂದಾಗ ಇವರು ಎಲ್ಲಿದ್ದರೋ ಅಲ್ಲಿ ಇವರಿರಲಿ! ನೀವು ಎಲ್ಲಿ ನಿಂತಿದ್ದರೋ ಅಲ್ಲೇ ನೀವು ನಿಂತಿರಿ! ಅಲ್ಲಿಂದ ಅವರು ಕದಲಬಾರದು; ಇಲ್ಲಿಂದ ನೀವೂ ಮುಂದಕ್ಕೆ ಹೆಜ್ಜೆ ಇಡಬಾರದು; ನಮ್ಮವರು ಇಬ್ಬರು ಖಾಕಿ ಬಟ್ಟೆಗಳನ್ನ ಇಲ್ಲಿ ನಿಮ್ಮ ಪಹರೆಗಾಗಿ ಕೊಡುತ್ತೇನೆ” ಎಂದು ಹೇಳುತ್ತ ಆ ಸಾಮಿ ಹೊರಟೇ ಹೋದ. “ಎಲ್ಲಿಗ್ರೀ?” ಅಂತ ನಾನು ಕೇಳಿದರೆ, “ತಲೆ ಎಲ್ಲ ಹರಟಬೇಡ” ಅಂತ ನನ್ನನ್ನೇ ಬೈದ.

ಯಾರಾದರೂ ಪುಣ್ಯಾತ್ಮರು ನ್ಯಾಯ ಹೇಳುತ್ತಾರೆಯೆ, ಅಂತ ನಾನು ದಾರಿಯಲ್ಲಿ ಹೋಗೋರನ್ನೆಲ್ಲ ಕೂಗಿದೆ, ನಿಂತಕಡೆಯಿಂದಲೇ. ಅವರಿಗೆಲ್ಲ ಅವರವರ ತಾಪತ್ರಯ. “ನನಗೆ ಇಲ್ಲಿ ಈ ಮನೇಲಿರುವುದಕ್ಕೇ ಭಯವಾ


ಗುತ್ತದೆ; ಗೋಡೆಯಾಚೇನೂ ಪುಂಡರು; ಉಗ್ರಾಣದಲ್ಲೂ ಕಳ್ಳರು; ಮಕ್ಕಳು ಮರಿ ಬೇರೆ ಅಸ್ತವ್ಯಸ್ತ; ನಿತ್ರಾಣ; ದೇವರ ಮನೆ ಎಲ್ಲ ಶೂನ್ಯ" ಎಂದು ಆ ನೆರೆಯಾತ ಗೋಳಾಡುತ್ತಿದ್ದ, ನನ್ನ ಕಿವಿ ಒಡೆಯುವ ಹಾಗೆ; ಎದೆ ಕರಗುವ ಹಾಗೆ.

ಆತ ಉಗ್ರಾಣದೊಳಕ್ಕೆ ಸೇರಿಸಿದ್ದನಲ್ಲಾ, ಆ ತಂಡದವರು, ಅವರು ಅದರ ಕಿಟಕಿಯನ್ನೊಡೆದು ಅಲ್ಲೊಂದು ಬಾಗಿಲಿಟ್ಟರು. ಸರಾಗವಾಗಿ ಹೊರಕ್ಕೆ ಹೋಗಿ ಬಂದು ಕತ್ತಿ ದೊಣ್ಣೆ ವಗೈರೆ ಗುಡ್ಡೆ ಹಾಕುತ್ತ ಬಂದರು. ಅವರ ಸಂಖ್ಯೆಯೂ ಹೆಚ್ಚಿತು.

ಅವರನ್ನ ಹದ್ದುಬಸ್ತಿನಲ್ಲಿಡಲು ಪೋಲೀಸಪ್ಪ ನಿಲ್ಲಿಸಿಹೋದ ಕಾನ್ಸ್ಟೇಬಲ್ಲು ಗಳೇ ಅವರಿಗೆ ಸಹಾಯಮಾಡ ಹತ್ತಿದರು. ಮಸೆಯುವ ಕಲ್ಲು, ದೊಣ್ಣೆ, ಕೋಲು ಇತ್ಯಾದಿ ಒದಗಿಸಿದರು

ಸರಿ! ನೆರೆಯಾತ "ನಾನಿಲ್ಲಿರಲಾರೆ" ಎಂದು ಗೋಳಾಡುತ್ತಿದಾನೆ ಇನ್ನೂ. ನಾನೇನೋ "ದೇವರಿದಾನೆ! ಒಂದಲ್ಲೊಂದು ದಿನ ಆ ಯೂ. ನೋ. ಈಶ್ವರ ನನ್ನ ನೆರೆಮನೆಯವವನನ್ನು ಕಾಪಾಡುತ್ತಾನೆ. ದುಷ್ಟ ಶಿಕ್ಷಣ, ಶಿಷ್ಟ ಪರಿ ಪಾಲನ, ಎರಡೂ ಅವನದೇ ಅಲ್ಲವೆ? ಇಂದಲ್ಲ ನಾಳೆ, ಸತ್ಯಮೇವ ಜಯತೆ, ಅಂತ ನಿಂತಕಡೆ ನಿಂತಿದೇನೆ, ಪಕ್ಕದ ಮನೆಯವನನ್ನು ಸಂತೈಸುತ್ತ.

—ರೇವಣ್ಣ.



ಭಾಷಣಗಳಿಂದ ಘೋಷಣಗಳು

—o—

೧

ಎರಡು ವರ್ಷಗಳ ಹಿಂದಿನವರೆಗೂ ನಮ್ಮನ್ನು ಬ್ರಿಟೀಷರು ಆಳುತ್ತಿದ್ದರು. ಆಗ, ನಾವು ಭಯಭರಿತರಾಗಿ ಅವರಲ್ಲಿಗೆ ನಿಯೋಗ ಹೋಗಿ ಅರ್ಜಿ ಸಲ್ಲಿಸಿ ನಮ್ಮ ಆಹಾರ ವಿಹಾರ ವಸತಿಗಳಿಗಾಗಿ "ಒಡ್ಡಿ" ಕೆಲಸ ಸಾಧಿಸುತ್ತಿದ್ದೆವು. ಈಗ ಅವರು ನಮ್ಮನ್ನು ಬಿಟ್ಟು ತೆರಳಿದಾರೆ. ಅಂದಮೇಲೆ........

೨

ನಮ್ಮಲ್ಲಿ ಜಾತಿ ಜಾತಿಗೆ ಕಚ್ಚಾಟ ತಂದುಹಾಕಿದವರು ಬ್ರಿಟಿಷರು; ನೌಕರಿಗಳ ಹಂಚಿಕೆ, ಪ್ರತ್ಯೇಕ ಶಾಲೆಗಳ ಸ್ಥಾಪನೆ, ಪ್ರತ್ಯೇಕ ಚುನಾವಣಾ ಕ್ಷೇತ್ರಗಳು, ಇವುಗಳ ಮೂಲಕ ಅವರು ನಮ್ಮಲ್ಲಿ ಕುರಾರ ಪ್ರಾಯವಾದ ಭೇದಭಾವಗಳನ್ನು ಬಿತ್ತಿ ಬೆಳೆಸಿದರು. ಈಗ, ಅವರು ನಮ್ಮನ್ನು ಬಿಟ್ಟು ತೆರಳಿದಾರೆ. ಅಂದಮೇಲೆ........

೩

ಸರ್ಕಾರಿ ಕಚೇರಿಗಳಿಗೆ ಕಾರಕೂನರನ್ನು ತಯಾರಿಸಿ, ಅವರು ಅಲ್ಲಿ ತಲೆಬಗ್ಗಿಸಿ ಹಗಲಿರುಳೂ ದುಡಿಯುವಂತೆ, ನಮ್ಮ ದೇಶದ ವಿದ್ಯಾಭ್ಯಾಸ ಕ್ರಮವನ್ನು ಏರ್ಪಡಿಸಿದವರು, ಬ್ರಿಟಿಷರು. ನಮ್ಮ ಮಾತೃಭೂಮಿ, ಇಡೀ ಭರತಖಂಡ ಎಂಬ ಭಾವನೆಯನ್ನು ಅವರು ತಮ್ಮ ವಿದ್ಯಾಪ್ರಚಾರದಿಂದ ನಮ್ಮ ಮನಸ್ಸಿಂದ ತೊಡೆದು ಹಾಕಿದ್ದರು. ಈಗ ಅವರು ನಮ್ಮನ್ನು ಬಿಟ್ಟು ತೆರಳಿದಾರೆ ....ಅಂದ ಮೇಲೆ........

೪

ತಮ್ಮ ದೇಶದ ಉಡಿಗೆತೊಡಿಗೆಗಳನ್ನು ಬ್ರಿಟಿಷರು ನಮಗೆ ತೊಡಿಸಿ, ನಮ್ಮನ್ನೆಲ್ಲ ಅವರ ಕಾರ್ಖಾನೆಗಳ ಗಿರಾಕಿಗಳನ್ನಾಗಿ ಮಾಡಿದರು. ಮಾತೆತ್ತಿದರೆ, ಭಾರತೀಯರು ಪಾಶ್ಚಾತ್ಯ ದೇಶಗಳನ್ನೇ ಸ್ತೋತ್ರಮಾಡಹತ್ತಿದ್ದರು.

ಪಡವಲನಾಡನ್ನೇ ನಮ್ಮ ನಾಡಿನ ಮಾದರಿಯಾಗಿ ಸ್ವೀಕರಿಸುವಂತೆ ಬ್ರಿಟಿಷರು ನಮ್ಮ ಹೃದಯವನ್ನು ಸೂರೆಗೊಂಡರು. ಆದರೆ, ಈಗ ಅವರಿಲ್ಲಿಲ್ಲ. ಅಂದ ಮೇಲೆ........

೫

ರೈತರು ಹೆಚ್ಚು ಬೆಳೆ ಬೆಳೆಯದಿರುವುದಕ್ಕೂ, ಬೆಳೆದದ್ದನ್ನು ಕಾಳಸಂತೆ ಕೋರರು ಮುಚ್ಚಿ ಮಾರುವುದಕ್ಕೂ, ಲಂಚ ಪಿಶಾಚಿ ತಾಂಡವವಾಡುವುದಕ್ಕೂ, ಬ್ರಿಟಿಷರೇ ಮೂಲಭೂತರು. ಸತ್ಯ ಅಹಿಂಸೆ ಎರಡನ್ನೂ ಅವರು ಬೆಳೆಯಗೊಡಲಿಲ್ಲ. ಅವರ ಆಡಳಿತದಲ್ಲಿ ನಾವು ನಿಶ್ಚೇತನರಾದೆವು. ನೆಲವೆಲ್ಲ ಬಂಜರು ಬಿತ್ತು; ಶ್ರಮ ಜೀವಿಗಳೆಲ್ಲ ಸೋಮಾರಿಗಳಾದರು; ಅಧಿಕಾರಿಗಳೆಲ್ಲ ಸುಖಲೋಲುಪ್ತರಾದರು:........ಆದರೆ, ಈಗ ಬ್ರಿಟಿಷರು ತೊಲಗಿ ಎರಡು ವರ್ಷಗಳಾದುವು ....ಅಂದ ಮೇಲೆ........



ಏನಯ್ಯಾ ! ಖರ್ಚಿಗೆ ಕಾಸೇ ಇಲ್ಲ—

ಒಂದು ಚಂದಾಪಟ್ಟಿ ತೆಗೆದುಕೊಂಡು ಹೊರಡಬೇಕು !

ನನ್ನ ಪೆನ್ನು

ಮೊನ್ನೆ ಟಪಾಲಾಫೀಸಿಗೆ ಹೋಗಿದ್ದೆ.... . .ಮನಿಯಾರ್ಡರ್ ಫಾರಂ ಭರ್ತಿ ಮಾಡುತ್ತಿದ್ದೆ ...ನನ್ನ ಸ್ವಂತ ಪೆನ್ನು ಹಿಡಿದು. ಖದ್ದರ್ ಜುಬ್ಬ ದವರು ಹಿಂದಿನಿಂದ ಪಕ್ಕಕ್ಕೆ ಬಂದು ಹಲ್ಲು ಕಿರಿದರು; ನನಗೆ ಅನುಮಾನ ವಾಯಿತು. ಎಡಗಡೆಗೆ ಸರಿದೆ. ಅವರು ತಲೆಕೆರೆದರು. "ಕೊಂಚ ತಮ್ಮ ಪೆನ್ ಕೊಡುತ್ತೀರಾ? ರುಜು ಮಾಡಬೇಕಾಗಿತ್ತು" ಎಂದರು ಕೊಟ್ಟೆ. ದೇಶಕ್ಕೆ ಸ್ವಾತಂತ್ರ್ಯ ಒದಗಿಸಿಕೊಟ್ಟ ವೀರ ದೇಶಾಭಿಮಾನಿಗೆ ನಾವು ಅಷ್ಟು ಪ್ರತ್ಯುಪಕಾರ ಕೂಡ ಮಾಡದಿದ್ದರೆ ಹೇಗೆ? ಅಲ್ಲದೆ. ಅಹಿಂಸಾ ವ್ರತವನ್ನು ಆಚರಿಸಿ ಪರಿಶುದ್ಧನಾಗಿರುವ ಆತ ಪೆನ್ನಿಗೆ ಹಿಂಸೆ ಮಾಡುವುದಿಲ್ಲವೆಂಬ ಭರವಸೆ, ನನಗೆ. ಆತ ನನ್ನ ಪೆನ್ನು ಹಿಡಿದು, ಅವನ ಸಹಜ ಶಕ್ತಿಯನ್ನೆಲ್ಲ ಉಪಯೋಗಿಸಿ, ಒತ್ತಕ್ಷರವಿಲ್ಲದಿದ್ದರೂ ಉದ್ದಕ್ಕೂ ಒತ್ತಿದ. ನಿಬ್ಬಿನ ಬಾಯಿ ಅಗಲವಾಯಿತು. ಒಂದೇ ಕಡೆಗೆ ಬಾಗಿ ಸರಿಯಿತು. ಅವನಿಂದ ನಾನು ಅದನ್ನು 'ವಂದನಾ ಪೂರ್ವಕ' ತೆಗೆದುಕೊಳ್ಳುವ ಸಮಯಕ್ಕೆ ಸರಿಯಾಗಿ ಪೋಲೀಸಿನವನೊಬ್ಬ ಅದನ್ನು ಸದರಿಯವರಿಂದ ಕಸಿದುಕೊಂಡು, ಒಂದು ಕಾರ್ಡು ಬರೆಯಲು ಪ್ರಾರಂಭಿಸಿದ. ಶಾಂತಿ ಪಾಲಕ, ಸಮಾಜದ ಹೊಲಕ್ಕೆ ಬೇಲಿ, ಆ ಬೇಲಿಯ ಮೇಲಿನ ಮುಳ್ಳು—ನಾನು ಮಾತನಾಡಲಿಲ್ಲ. ಅಲ್ಲದೆ, ನನ್ನ ಕೈಗೆ ಅದನ್ನು ಹಿಂದಕ್ಕೆ ಕೊಡಬೇಕಾದ ಜವಾಬ್ದಾರಿ, ಖದ್ದರ್ ಜುಬ್ಬದ್ದು. ಅವನದೇ ಹೊಣೆಗಾರಿಕೆ.

ಅರ್ಧ ಕಾರ್ಡು ಬರೆದು ಮುಗಿಸುವುದರೊಳಗೆ, ಮಸಿ ಇಳಿಯದಂತಾ ಯಿತು. ಪೋಲೀಸಿನವನು ಅದನ್ನು ಬಲವಾಗಿ ಕೊಡವಿದ. ನಿಬ್ಬು ಗೋಡೆಗೆ ತಗುಲಿತು. ಮಸಿ ಮೂರು ಜನರ ಮೈಮೇಲೆ ಚೆಲ್ಲಿತು. ಗಾರೆ ಕೆಳಗೆ ಬಿತ್ತು, ಆದರೂ, ತಾಳ್ಮೆಯಿಂದ, ಅವನು ಅದರ ನಿಬ್ಬನ್ನು ಹಲಗೆಗೊತ್ತಿ ಬಾಯಿಕೂಡಿಸಿ. ಕಾರ್ಡನ್ನು ಪೂರ್ತಿ ಮಾಡಿದ.

ಪೋಲೀಸಿನವನಿಂದ ಅದನ್ನು ಬ್ಯಾಂಕ್ ಗುಮಾಸ್ತೆ ಒಬ್ಬ ಸಾಲ ಪಡೆದ. "ತಾಳಿ! ನಾನು ಅದನ್ನ ನಿಮ್ಮ ಕೈಗೆ ಕೊಟ್ಟೇ ಹೋಗುತ್ತೇನೆ; ಅವನು ಕೊಡದೆ ಹೋದರೆ ನನ್ನನ್ನ ಕೇಳಿ" ಎಂದು ಖದ್ದರ್ ಜುಬ್ಬಕ್ಕೆ ಹೇಳುತ್ತಾ, ಪೋಲೀಸಿ ನವನು ಚೌಕಕ್ಕೆ ನಡೆದ. ಬ್ಯಾಂಕ್‌ನವನು ಯಾವುದೋ ಸ್ಟಾಂಪಿನ ಲೆಕ್ಕ

ಕೂಡುವುದಕ್ಕೆ, ಕಳೆಯುವುದಕ್ಕೆ ಬಹಳ ಹೊತ್ತು ಪ್ರಯತ್ನಿಸಿದ. "ಥತ್" ಎಂದು ಒಂದು ಸಲ ತಲೆ ಚಚ್ಚಿಕೊಂಡಾಗ, ನನ್ನ ಪೆನ್ನು ಕೆಳಕ್ಕೆ ಬಿತ್ತು. ಅದರ ಹೊಟ್ಟೆ ಸೀಳಿತು.

ಖದ್ದರ್ ಜುಬ್ಬ ಪೋಲೀಸಿನವನನ್ನು ಕರೆದ; ಪಂಚಾಯ್ತಿ ನಡೆಸಿದರು, ಪೋಸ್ಟ್‌ಮಾಸ್ಟರು "ನಾಳೆ ಸಂಜೆಯೊಳಗೆ ಬೇರೆ ಯಾರಿಂದಲಾದರೂ ಒಂದು ಪೆನ್ ಸಂಪಾದಿಸಿ, ನಿಮ್ಮ ರೂಮಿಗೆ ತಂದು ಕೊಡುತ್ತಾರೆ, ಸಾರ್, ಇವರು. ಅದು ನಿಮ್ಮ ಪೆನ್ನಿಗಿಂತ ಹೊಲಸಾಗಿದ್ದರೆ, ನಿಮ್ಮ ಹಣೇಬರಹ; ಅದಕ್ಕಿಂತ ಚೆನ್ನಾಗಿದ್ದರೆ, ನೀವು ಈ ಗುಮಾಸ್ತರಿಗೆ, ಅವರು ಪಟ್ಟ ಶ್ರಮಕ್ಕೆ ಏನಾದರೂ ಇನಾಮು ಕೊಡಿ, ಪಾಪ" ಎಂದು ಖದ್ದರ್ ಜುಬ್ಬ ಮತ್ತು ಪೋಲೀಸಿನವರು ಮಧ್ಯಸ್ತಿಗೆ ಮಾಡಿ. ನನ್ನನ್ನ ಹೊರಕ್ಕೆ ಕಳುಹಿಸಿದರು.

"ನಾಳೆ ದಿವಸ" ತಾನೆ? ಇವತ್ತೆ ಅದರ ಚಿಂತೆ ಏಕೆ?—ಅಂತ ನಾನೂ ಸಮಾಧಾನವಾಗಿದೇನೆ—

—ಗಂಗಾಧರ.



ಶರಚ್ಚಂದ್ರಬೋಸರ ದುರ್ಗಾಪೂಜೆ

ಟೇಮಿಂಗ್ ಆಫ್ ಧಿ ಷ್ರೂ?

'ನಿಜವಾಗಲೂ ಇವಳಿಗೆ ಗಂಡ ಹುಟ್ಟಿದಾನೇ?" ಅಂತ ಗೋಳಿಟ್ಟರು ಚಿಕ್ಕಪ್ಪ. ಅಯ್ಯೋ ಅನ್ನಿಸಿತು. ಪಾಪ ಚಿಕ್ಕಪ್ಪ, ನನಗೆಷ್ಟೋ ಮಾಡಿದೋರು, ನಮ್ಮ ಅಂತಃಕಲಗಳ ಮಧ್ಯಸ್ಥಿಕೆಗಾರ್ರು. ಅವರ ಈ ಸಂಕಟಾನ ಪರಿಹರಿಸಲೇ ಬೇಕು ಅಂತ ಪ್ರತಿಜ್ಞೆ ಮಾಡಿದೆ—ಪದ್ದೂಗೊಬ್ಬ ಪತಿದೇವನ್ನ ಹೊಂಚಿ ಕೊಡೋಕ್ಕೆ!

ಹೆಣ್ಣಿಗೊಂದು ಗಂಡು ಸಿಕ್ಕಲ್ವೇ, ಆದೊಂದು ಮಹಾ ಪ್ರಮಾದವೇ ಅನ್ನ ಬಹುದು. ಪದ್ದೂ ವಿಷಯದಲ್ಲಿ ಅದು ಪ್ರಮಾದವೇ. ಹಳ್ಳೀ ಹುಡುಗಿ, ಜೊತೆಗೆ ಮೊದಲನೇ ದರ್ಜೆ ಬಜಾರಿ. ಮನೆಯೋರನ್ನೆಲ್ಲಾ ಗಡಗುಟ್ಟಿಸೋ ದಲ್ಲದೆ, ಹಳ್ಳಿ ಜನವೆಲ್ಲಾ ಹೆದರ್ತಿದ್ರು ಅಯ್ಯೋರ ಮಗಳಿಗೆ. ದನಗಳು ಕೂಡ ಅವಳ ಗಂಟಲಿಗೆ ದಾರೀ ಬಿಡ್ತಿದ್ದುವು!

ನನ್ನ ಬುದ್ಧಿಯೆಲ್ಲಾ ತಳಮೇಲು ಮಾಡಿ ಈ ಕನ್ಯಾಮಣಿಗೊಂದು ವರಾನ ಹುಡುಕಿದೆ. ಸೆಕ್ರೆಟೇರಿಯಟ್ ಶಾಮೂಗೆ ಕೊಟ್ಟುಬಿಡಿ ಚಿಕ್ಕಪ್ಪಾ ಅಂದೆ.

"ನಿನಗೇನು ಹುಚ್ಚೋ ಭ್ರಾಂತೋ? ಶಾರೋ ಹಳ್ಳಿ ಶಾನುಭೋಗನ ಮಗಳು, ಓದಿಲ್ಲ, ಬರಹವಿಲ್ಲದ ಹಳ್ಳೀ ಹೆಣ್ಣನ್ನ ನಿಮ್ಮ ಶಹರಿನ ಶಾಮು ಮೆಚ್ಚ್ತಾನೇ" ಎಂದರು. ಅವರ ಕಿವಿಯಲ್ಲಿ ಪಿಸುಗುಟ್ಟಿದೆ ....

"ನಾಲ್ಕೆಕರೆ ಗದ್ದೆ ನಿನ್ಹೆಸರಿಗೇ—ನನ್ನ ತರುವಾಯ" ಅಂದರು ಚಿಕ್ಕಪ್ಪ; (ಚಿಕ್ಕಮ್ಮನ ಕೈಲಿ ಆರು ತಿಂಗಳ ಮಗು). ನಾಲೇ ಕೆಳಗಿನ ನವಿರಕ್ಕಿಯ ಸವಿಗನಸಿಗೆ ಸೋತ ಶಾಮು ಹೂಗುಟ್ಟಿಯೇ ಗುಟ್ಟಿದ!

ತಾಳೀ/ ಕಟ್ಟಿದ ತೊಂಬತ್ತು ದಿನಕ್ಕೆ ಹೂಡಿದ ಶಾಮು ಹೊಸ ಸಂಸಾರ ಪದ್ದೂ ಸಹಿತ.

*　　*　　*

"ಥೂ, ಇದೇನು ಮನೆ? ನಮ್ಮ ದನದ ಕೊಟ್ಟಿಗೆ ಸಾವಿರ ವಾಲು ಘನ ವಾಗಿದೆ" ಆರ್ಭಟಿಸಿದಳು ಗೃಹಲಕ್ಷ್ಮಿ. ಆಜೂಬಾಜೂ ಆರು ಮನೆಯವರು ಥರಥರನೆ ನಡುಗಿದರು.

*　　*　　*

"ಅಯ್ಯೋ ಇದೇನಕ್ಕಿ! ಆಚಾರ್ರ ಮನೇ ಅಕ್ಷತೇ ಕಾಳಿದ್ದಾಗಿದೆ" ಎಂದ
ಬ್ಬರಿಸಿದಳು. ಅಕ್ಕ, ಪಕ್ಕ, ಎರಡು ಮನೆಗೂ ಕೇಳಿಸಿತು.

* * *

"ಈ ಹಸೀ ಸೌದೆ ನಾನುರಿಸಲಾರೇ ಉರಿಸಲಾರೆ" ಒರಲಿದಳು ಪದ್ದು. ನಡುಮನೆಯಲ್ಲಿದ್ದ ಶಾಮುವಿನ ಕಿವಿಗೆ ಬಿತ್ತು.

* * *


"ವಾರದ ಅಕ್ಕಿ ಹಂಚಿ ಅನ್ನ ಮಾಡಿದರೆ ಮುಕ್ಕಾಲು ಪಾಲು ತಾವೇ ಹೊಡೆದುಬಿಡುತ್ತಾರಲ್ಲಾ. ಈ ಕಿರಿಕೆಟ್ಟಾಟಕ್ಕೆ ಯಾಕೆ ಹೋಗುತ್ತಾರೋ" ಎಂದು ಕಿರಲಿದಳು. ಅವಳಿಗೆ ಮಾತ್ರ ಕೇಳಿಸಿತು.

* * *

ಕಳೆದ ತಿಂಗಳು ಚೇಲಪಾಣಿಯಾಗಿ ನೊಸೈಟೀಲಿ ನಿಂತಿದ್ದಳು. "ಏನೇ ಪದ್ದೂ ಬಂದಿದ್ದೇ" ಅಂದ. "ಎಂಟು ದಿನದಿಂದ ಬೆಲ್ಲದ ಕಾಫಿ ಕುಡಿದು ಸಾಕಾಯಿತು. ಸಕ್ರೆ ಏನಾದ್ರೂ ಸಿಕ್ಕುತ್ತೇನೋ ಅಂತ ಬಂದೆ" ಅಂದಳು. ರೇರ್ಷ ಜೀವಿಯು ರೋಸಿದ ರಾಗದಲ್ಲಿ!

—ಟಿ. ಸುನಂದಾ.,

——o——



ಉಪಾಯಗಳು

ಭಾರೀ ಮುನಿಸಿಪಾಲಿಟಿಗಳ ವರಮಾನವನ್ನು ಹೆಚ್ಚಿಸಲು ಉಪಾಯಗಳನ್ನು ಸೂಚಿಸುವುದಕ್ಕಾಗಿ ಸರ್ಕಾರದವರು ಒಂದು ಸಮಿತಿಯನ್ನು ರಚಿಸಲಿರುವರಂತೆ. ಆದರೆ, ಅಷ್ಟು ಹಣವನ್ನೂ, ಅಥವಾ ಅದಕ್ಕೆ ಖರ್ಚಾಗುವುದರ ಅರ್ಧ ಭಾಗ ಹಣವನ್ನು ನನಗೆ ಕೊಡುವುದಾದರೆ, ನಾನೇ ಅಮೂಲ್ಯ ಸಲಹೆಗಳನ್ನು ಕೊಡಲು ಸಿದ್ಧನಿರುವೆನು. ನಾನು ಕೊಡುವ ಸಲಹೆಗಳನ್ನು ಈಗಲೇ ಇಂದೇ ಜಾರಿಗೆ ತರಬಹುದೆಂಬುದನ್ನೂ ಅವುಗಳಿಂದ ಅಪಾರ ಹಣವನ್ನು ಪ್ರಯಾಸವಿಲ್ಲದೆ ಶೇಖರಿಸಬಹುದೆಂಬುದನ್ನೂ ನಿಮಗೆ ತೋರಿಸುವುದಕ್ಕಾಗಿ ಇಕೊ, ಕೆಲವು ಮಾದರಿಗಳು :—

೧. ರಸ್ತೆಗಳನ್ನು ರಿಪೇರಿ ಮಾಡದೆ ಇರುವುದು. ಇದರಿಂದ (ಚಪ್ಪಲಿ, ಷೂಗಳು ಹರಿಯುತ್ತವೆ. ಟೈರ್‌ಗಳು ಪಂಕ್ಚರಾಗುತ್ತವೆ. ಟೈರ್ ಟೂಬ್ ವ್ಯಾಪಾರಿಗಳಿಂದಲೂ, ರಿಪೇರಿದಾರರಿಂದಲೂ, ಪಾದರಕ್ಷಾ ವ್ಯಾಪಾರಿಗಳಿಂದಲೂ ಕಮಿಷನ್ ಪಡೆಯುವುದು. ಧೂಳು ಹಾರಾಡಿ, ಶ್ವಾಸಕೋಶ ಸಂಬಂಧವಾದ ಖಾಯಿಲೆಗಳು ಹರಡುತ್ತವೆ. ಆದ್ದರಿಂದ ಅವುಗಳ ಚಿಕಿತ್ಸೆಗಾಗಿ ಔಷಧಿಗಳನ್ನು ತಯಾರುಮಾಡುತ್ತಿರುವ ಅಮೇರಿಕನ್, ಬ್ರಿಟಿಷ್ ಕಂಪನಿಗಳಿಂದ ಕಮಿಷನ್ ಪಡೆಯುವುದು.

೨. ಮುನಿಸಿಪಲ್ ರಸ್ತೆ ಪಕ್ಕದಲ್ಲಿರುವ ಮರಗಳ ಸುತ್ತಲೂ, ಕೊಂಬೆಗಳ ಮೇಲೂ ಸಿನಿಮಾ ಕಂಪೆನಿಯವರು ಅಂಟಿಸುವ, ನೇತಾಡಿಸುವ, ಹಾರಾಡಿಸುವ, ಜಾಹಿರಾತುಗಳಿಗಾಗಿ ಹಣ ವಸೂಲು ಮಾಡುವುದು. ಅವುಗಳಲ್ಲಿ ಹೆಣ್ಣಿನ ಚಿತ್ರವಿದ್ದರೆ, ಹೆಚ್ಚಿನ ದರ, ನಗ್ನ ಚಿತ್ರಗಳಿದ್ದರೆ, ಇನ್ನೂ ಹೆಚ್ಚಿನ ದರ, ಎಂದು ವಿಧಿಸುವುದು.

೩. ಮುನಿಸಿಪಲ್ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳಲ್ಲೆಲ್ಲ ಒಂದು ಮಗು ಒಂದು ದಿನ ಗೈರ್‌ಹಾಜರಾದರೆ, ಅರ್ಧ ಆಣೆ, ಒಂದು ಆಣೆ ಜುಲ್ಮಾನೆ ಎಂದು ವಿಧಿಸುವುದು. ಅನೇಕ ತಾಯ್ತಂದೆಯರು ವರ್ಷದ ಲೆಕ್ಕದ ಪ್ರಕಾರ ಮೊತ್ತವಾಗಿಯೇ ಜುಲ್ಮಾನೆ ಹಣವನ್ನು ಸಂತೋಷವಾಗಿ ಕಟ್ಟುತ್ತಾರೆ.


೪. ಹಾಲು ಮಿಶ್ರವಾದ ನೀರನ್ನು ಮಾರಲು ಲೈಸನ್ಸುಗಳನ್ನಿಟ್ಟು, ಹಾಲಿನ ಪ್ರಮಾಣ ಕಡಿಮೆಯಾದಂತೆಲ್ಲ, ದರವನ್ನು ಹೆಚ್ಚಿಸುವುದು.

೫. ಯಾರ ಭಾವ ಚಿತ್ರವನ್ನು ಯಾರು ಮುನಿಸಿಪಲ್ ಸರಹದ್ದಿನಲ್ಲಿ ಅನಾವರಣ ಮಾಡಬೇಕಾದರೂ, ಚಿತ್ರದಲ್ಲಿ ಚಿತ್ರಿತವಾದ ವ್ಯಕ್ತಿ ಕಡಮೆ ಪಕ್ಷ ೫ ರೂ.ನ್ನಾದರೂ ಮುನಿಸಿಪಲ್ ಫಂಡಿಗೆ ಕೊಡತಕ್ಕದ್ದೆಂದು ಕಾನೂನು ಮಾಡುವುದು.

೬. ಗಾಂಧಿ ಸತ್ಯ, ಅಹಿಂಸೆ ಎಂಬ ಮಾತುಗಳನ್ನು ಮುನಿಸಿಪಲ್ ಸರಹದ್ದಿನಲ್ಲಿ ಯಾರು ಉಪಯೋಗಿಸಬೇಕಾದರೂ ಲೈಸನ್ಸ್ ಪಡೆಯಬೇಕೆಂದು ವಿಧಿಸುವುದು. "ಜನ ಸೇವೆಯೇ ಜನಾರ್ಧನ ಸೇವೆ", "ಏನೇ ಬರಲಿ, ಒಗ್ಗಟ್ಟಿರಲಿ" ಎಂಬ ಶ್ಲೋಗಗಳಿಗೆ ಮಾತ್ರ ಹೆಚ್ಚು ದರ.

೭. ಬಸ್ ಸಿಗದೆ, ಅದರಲ್ಲಿ ಅನುಭವಿಸಬೇಕಾದ ಕಷ್ಟ ಪರಂಪರೆಗಳಿಂದ ತಪ್ಪಿಸಿಕೊಂಡ ಪ್ರತಿಯೊಬ್ಬ ನಾಗರಿಕನೂ ತಲಾ ಏನನ್ನಾದರೂ ಮುನಿಸಿ ಪಾಲಿಟಿಗೆ ಕೊಡತಕ್ಕದ್ದು.......ಇತ್ಯಾದಿ.

—ಗಂಗಾಧರ.



ಇವನಿಗೆ ಹೇಗಪ್ಪಾ ಹೇಳೋದು—
ಮಂತ್ರಿಗಳು ನಮ್ಮ ಹಳ್ಳಿಗೆ ಬರೋಹೊತ್ತಿಗೆ ಹನ್ನೆರಡಾಗಿರುತ್ತೆ ರಾತ್ರಿ—ಅಂತ.

ನಾಳಿನ ನನ್ನ ಸಮಸ್ಯೆ

ಚುನಾವಣೆಗಳಿನ್ನೇನು ಪ್ರಾರಂಭವಾಗುತ್ತದೆ. ಆಗಲೇ ಉಮೇದುವಾರರು ಯಾರ್‍ಯಾರು ಎಂಬುದನ್ನು ಪಕ್ಷ ಪ್ರತಿಪಕ್ಷಗಳು ಗೊತ್ತುಮಾಡುತ್ತಿದಾರೆ. ಖದ್ದರ್ ಅಂಗಿಗಳನ್ನೂ, ಟೋಪಿಗಳನ್ನೂ ಹೊಲಿಗೆಗೆ ಕೊಡುತ್ತಿದಾರೆ. ಮುದ್ರಣಾಲಯಗಳೂ ಹೊಸದಾಗಿ ಸ್ಥಾಪನೆಯಾಗುತ್ತಿವೆ. ಭಾರತಾದ್ಯಂತವೂ ಜನ ಒಬ್ಬರನ್ನೊಬ್ಬರು ನೋಡಿ ಹಲ್ಲು ಕಿರಿಯುತ್ತಿದಾರೆ. ಮುಖ್ಯ ಮುಖ್ಯ ಪ್ರತಿನಾಯಕರಿಗೆಲ್ಲ ದೊಡ್ಡ ಚಾಕರಿ ದೊರೆಯುತ್ತಿದೆ; ಅವರ ದಿಗ್ಬಂಧನ ಕೆಲಸ ಸಾಂಗವಾಗಿ ನಡೆಯುತ್ತಿದೆ. ಗ್ರಾಮೋದ್ಧಾರ, ಆಹಾರೋತ್ಪಾದನೆ, ಕೂಪ ನಿರ್ಮಾಣ, ಬಸ್ ಪರ್ಮಿಟ್ ಇತ್ಯಾದಿ ಉಪಾಯಗಳಿಂದ ಅಲ್ಲಲ್ಲಿ ಹತ್ತೂ ಜನರ ಹಣ, ಹತ್ತೂಕಡೆ ವಿತರಣೆಯಾಗಿ ಜನ ಮನ ಎತ್ತ ಒಲಿಯ ಬೇಕೋ, ಅತ್ತ ಎಳೆಯಲ್ಪಡುತ್ತಿದೆ. ಪ್ರಗತಿ, ವ್ಯಕ್ತಿ ಸ್ವಾತಂತ್ರ್ಯ, ಹಂಸ ಕ್ಷೀರ, ಗಾಂಧೀ ತತ್ವ ಎಂಬ ಮಾತುಗಳು ಮಾಟ ಮಾಡಲು ಪ್ರಾರಂಭಿಸುತ್ತಿವೆ.


ಈಗ ಪ್ರತಿಯೊಬ್ಬನೂ ಒಂದು ಸಮಸ್ಯೆಯನ್ನು ತಮತಮಗೆ ನಿರ್ಧರಿಸಿ ಕೊಳ್ಳಬೇಕಾಗಿದೆ. ನಾನು ಉಮೇದುವಾರನಾಗಿ ನಿಲ್ಲಬೇಕೆ? ಅಥವಾ, ಉಮೇದುವಾರನ ಏಜಂಟಾಗಿ ನಿಲ್ಲಬೇಕೆ?—ಎಂದು. ನನ್ನ ಮಟ್ಟಿಗೆ ಹೇಳುವುದಾದರೆ, ಏಜಂಟಾಗಿ ನಿಲ್ಲುವುದೇ ಕ್ಷೇಮ. ಬುದ್ಧಿವಂತರು ಒಬ್ಬರೂ ಸ್ಥಾನಾರ್ಥಿಯಾಗಿ ನಿಲ್ಲುವುದಿಲ್ಲ—ಏಕೆಂದರೆ, ಅದರಲ್ಲಿ ಶ್ರಮ ಹೆಚ್ಚು. ಏಜಂಟಾದರೆ, ಕೈತುಂಬ ಹಣ, ಕಾರ್ ತುಂಬ ಪೆಟ್ರೋಲ್, ಹೋದಕಡೆಯೆಲ್ಲ ಗೌರವ, ಹೊಟ್ಟೆ ತುಂಬ ತಿಂಡಿ, ಬಾಯಿ ತುಂಬ ತಾಂಬೂಲ. ನಮ್ಮ "ಆಸಾಮಿ"ಗೆ ಬಂದ ವೋಟೆಲ್ಲ ನಮ್ಮ ಅವಿಶ್ರಾಂತ ಪರಿಶ್ರಮದಿಂದಲೇ ಬಂದದ್ದು ಎಂದು ನಾವು ಹೇಳಿ ಭುಜ ತಟ್ಟಿಕೊಳ್ಳಬಹುದು. ಅಲ್ಲದೆ, ನಮ್ಮ ಕುದುರೆ ಗೆದ್ದರೆ, ಅಂದರೆ ಮಂತ್ರಿಯಾದರೆ, ನಮಗೆ ಅವರ ಕೃಪೆಯಿಂದ ಕೆಲಸವೇ ಇಲ್ಲದ ಒಂದು ಭಾರಿ ಹುದ್ದೆ ಖಾತ್ರಿ! ಅವರು ದುಡಿಯಲಿ, ಬೈಗಳನ್ನು ತಿನ್ನಲಿ, ನಮ್ಮನ್ನು ನಿಯಮಿಸಿದ್ದಕ್ಕಾಗಿ ಅಸೆಂಬ್ಲಿಗಳಲ್ಲಿ ಬರುವ ಪ್ರಶ್ನೆಗಳಿಗೆ ಉತ್ತರ ಕೊಡಲಾರದೆ, ಅವರು ತತ್ತರಿಸಲಿ! ಪತ್ರಿಕೆಗಳಲ್ಲಿ ಬರುವ ಟೀಕೆಗಳಿಗೆ ಅವರು ಹೆದರಿ ನಡುಗಲಿ! ನಮಗೆ ಆ ತಾಪತ್ರಯವಿಲ್ಲ.

ಒಂದು ವೇಳೆ ನಮ್ಮ ಕುದುರೆ ಗೆಲ್ಲಲಿಲ್ಲ ಅನ್ನಿ! ನಮ್ಮ ಎದುರು ಪಕ್ಷದವರೇ ಗೆದ್ದರು ಅನ್ನಿ! ಆಗಲೂ ನಮಗೆ ಲಾಭವಿಲ್ಲದೆ ಇಲ್ಲ---ನಮ್ಮನ್ನು ಒಲಿಸಿಕೊಳ್ಳಲು ಅವರು ನಮ್ಮನ್ನು ಕರೆದು ಉಪಚರಿಸುವರು. ಮುಂದಿನ ಬಾರಿ ನಾವು ಪ್ರಚಾರ ನಡೆಸಿ ಅವರನ್ನು ಸೋಲಿಸದೆ ಇರಲು, ಈಗಲೇ ನಮ್ಮನ್ನು ಒಂದು ಸರ್ಕಾರಿ ಪೀಠದಲ್ಲಿ ಕೂರಿಸಿಯೇ ಕೂರಿಸುವರು.

ಆದ್ದರಿಂದ, ಏಜಂಟಾಗಿ ಮೆರೆಯುವುದೇ ಸ್ರದ್ಯಃ ಪರಿಸ್ಥಿತಿಯಲ್ಲಿ ಉಭಯತ್ರ ಲಾಭಕರ.

—ರೇವಣ್ಣ.

---o---



ಆ ಹಕ್ಕೀನ ಹೊಡೆದೆ. ಸದ್ಯ ಒಂದು ಖಾಲಿ ಗೂಡು
ವಾಸಕ್ಕೆ ಸಿಕ್ಕಿತು !

ಪ್ರಗತಿ ಕವನ

ಕಂಬನಿ ಏತಕೆ? ಹುಂಬನೆ ನೀನು?
ಗಗನದ ಕುಸುಮವೆ? ಹಸಿವು? ದಾಹ?
ಭೀಮ ಭಯಂಕರ,

ನವಯುಗ ಶಂಕರ, ಕೋಣನ ಕಿಂಕರ!
ಕೆಸರಲಿ ಮೊಸರಲಿ, ನೆತ್ತರ ಕುತ್ತದಿ
ಹರಿಯುತಿದೆ, ಓ! ಕ್ರಾಂತಿಕಾಳಿ ನದಿ!
ತುತ್ತಿಗೆ ತೆತ್ತಿಹ ಸುತ್ತಿಗೆ ಕುಡುಗೋ
ಲತ್ತಲು ಎತ್ತಲು, ಕೆಂಪಿನ ಹೂ!
ಗ್ರೀಷ್ಮದ ಹಸುರು, ಶ್ಲೇಷ್ಮದ ಬಸುರು,
ಬೇವಿನ ಕಹಿಯಿದೆ; ಮಾವಿನ ಹುಳಿಗೆ!

ಮಾವನ ಮಗಳೇ
ಭೀಮ ಭಯಂಕರ;
ಮಸಕೋ ಕಿಂಕರ, ಓ, ಋಣ ಶಂಕರ.

— ಚೇಜು.



ಪುಸ್ತಕಗಳ ಅಟ್ಟಿಗೆ ಬಣ್ಣ ಹಾಕೇ ಮೆಚ್ಚುವ ಕಲೋಪಾಸಕ.

ಪ್ರಾರ್ಥನೆಯ ಫಲ

(ಗೋಳು ರಗಳೆಯಲ್ಲಿ ಒಂದು ದೃಶ್ಯ)

[ಮುನಿವ ಸಾಹೇಬರು ಕೆಂಡ ಕಾರಿ ಗುಮಾಸ್ತೆ ಗಂಗಾಧರನನ್ನು ಪಂಚಾಕ್ಷರಿಯ ಮಾತು ಕೇಳಿ, ಉಗಿದು ಉಪ್ಪು ಹಾಕಿ ಹಿಪ್ಪಲೇಕಾಯಿ ಮಾಡಿದ್ದರು. ಇದು ನಡೆದ ಎರಡನೇ ದಿನ ದೀನನಾಗಿ ಗಂಗಾಧರ ಆಫೀಸಿನ. ಗುಮಾಸ್ತ ಪರಿವಾರವೆಲ್ಲಾ ತೆರಳಿ—ಸಾಹೇಬರೊಬ್ಬರೇ ಮೇಜಿನ ಮೇಲೆ ಕಾಲು ಹಾಕಿ ಒರಗಿ ಕುಳಿತಾಗ, ಮೆಲ್ಲಗೆ ಒಳಕ್ಕೆ ನುಸುಳಿ—ಕರಜೋಡಿಸಿ, ಬಾಗಿ ಬದಿಗೆ ನಿಂತು ಮೃದುವಾಗಿ ಕೆಮ್ಮುವನು. ಸಾಹೇಬರು ಕೆಂಗಣ್ಣಿನಿಂದ ನೋಡುವರು. ಗಂಗಾಧರ ಪ್ರಲಾಪಿಸುವನು].

ಗಂಗಾಧರ :— ತಪ್ಪಾಯ್ತು— ತಪ್ಪಾಯ್ತು— ಎತ್ತಲೋ ನೋಡಿ ಮಾಡಿದ ತಪ್ಪು. ಮನದಿಂದ ಕಲ್ಮಷವ ಕಿತ್ತೊಗೆದು ಉದ್ಧರಿಸಬೇಕು.

ಸಾಹೇಬರು :—(ಕೋಪ) ತಪ್ಪೇನು ಒಪ್ಪೇನು—ಪಿತ್ತ ನೆತ್ತಿಯಲಿರಲು. ಕತ್ತೆಗಳು ನೀವೆಲ್ಲ. ಇಷ್ಟು ದಿನ ಸಹಿಸಿ ಸಾಕಾಗಿಹುದು. ಉಪ್ಪು ತಿನ್ನಲೂ ಬೇಕು, ಎರಡ ಬಗೆಯಲು ಬೇಕು—ಎಂದೆಂಬ ಈ ಮಂತ್ರ ಇನ್ನಿಲ್ಲಿ ನಡೆಯದು. ತಪ್ಪು ಮಾಡಿದ ಪಾಪಿ ! ಕೊಪ್ಪಕ್ಕೆ ತೊಲಗು.

ಗಂಗಾಧರ :—(ದೀನತೆ) ದಯತೋರಿ—ದಯತೋರಿ ಕ್ಯಾಕರಿಸದಿರಿ, ಥೂಕರಿಸದಿರಿ ಗುರುವೆ ನಿಮ್ಮ ಮಠ ಸೇರಿಹೆನು—ಮೂರು ಮಕ್ಕಳ ತಂದೆ ಮೇಲ್ ಮಡದಿಗೆ ಮೂರು ತಿಂಗಳ ಬಯಕೆ. ಪಿಂಚಣಿಯ ಮೋಹದಿಂ, ತಮ್ ಸೇವೆ ಮಾಡಲುಂ ಟೊಂಕ ಕಟ್ಟಿದ ನಾನು—ಎರಡಬಗೆಯುವುದುಂಟೆ ? ಪಾಪಿ ಪಂಚಾಕ್ಷರಿಯು ಚಾಡಿ ಮಾತಿದೆಲ್ಲ.

ಸಾಹೇಬರು :— ಬಾಯ್‌ಮುಚ್ಚು—ಸುಳ್ಳನಾಡಿದೆಯಾ ಪಾಪಿ—ಪಾಪ ಪಸುಳೆ ಆ ಪಂಚಾಕ್ಷರಿ—ಪಂಚಪಾತ್ರೆಯ ತುಂಬ ಬಿಸಿ ಬೇಳೆ ಮಾಡಿಸಿ— "ಗುರುವೆ ಇದೋ ತೃಣಸೇವೆ" ಎಂದು ಕೈಮುಗಿದು ಎಮಗಿತ್ತ. ನಿನಗೆಲ್ಲಿ ಆ ಭಕ್ತಿ—ನಮ್ಮ ಭುಕ್ತಿಗೆ ಬರುವೆ.

ಗಂಗಾಧರ :—ನಾಷ್ಟಾಂಗದೊಡನೆ ಕೈ ಮುಗಿದು ದಾಸಾನುದಾಸನೆಂದೊರಲುವೆನು ಪರಾಂಬರಿಸಿ, ನಿಮ್ಮ ನೇತ್ರಗಳಿಗೆ ಅಂಜನವ ಹಚ್ಚಿರುವ ಆ ಪಂಚಾ

ಕ್ಷರಿ. ಚಿನ್ನದಂತಹ ತಮ್ಮ ಕಿವಿಗಳಿಗೆ ಇಲ್ಲದುದ ತುಂಬಿ ಹಿತ್ತಾಳೆಯದು ಮಾಡಿರುವ. ಸುಲೋಚನದೊಡಗೂಡಿ ಈ ಭಕ್ತನ ಭಕ್ತಿಯು ನೋಡಿ ....ದಿಟವೆಂದು ದಿಟ್ಟಿಸಿನೋಡಿ ಗುರುವೆ—ಅಂದು ಆ ಬೆಳದಿಂಗಳಲಿ ಕೋಗಿಲೆಯು ವಾಡಲು ಬಿಸಿಬಿಸಿಯ ಬೊಂಬಾಯಿ ಬೊಂಡ ಸಾಂಬಾರ ವನು ಕೊಟ್ಟದ್ದು ಈ ಕೈಯೇ ಅಲ್ಲವೆ?. ಮುಂಚಿನ ಹಳ್ಳಿಯಲಿ ಬಾಯಾರಿ ಬಳಲಿ ಬಾಡಿ ಬೀಳುವಂತಾದಾಗ— ಗಾಳಿ ಹಾಕಿ ಎಳೆನೀರು ಬಾಯಿಗೆ ಸುರಿದವನು ಈ ಗಂಗಾಧರನೋ? ಆ ಪಂಚಾಕ್ಷರಿಯೋ? ಮೊನ್ನೆ ತಮ್ಮ ತಂದೆಯ ಶ್ರಾದ್ಧದ ದಿನ—ನೀರು ನೇದಲು ಬಾರೆಂದು ಆ ಪಂಚಾಕ್ಷರಿಯ ತಮ್ಮಪ್ಪಣೆಯಂತೆ "ಬಾರಯ್ಯಾ"—ಎಂದಾಗ ಆ ಪಾಪಿ ಏನೆಂದ ಗೊತ್ತೆ?— ಶಾಂತಂ ಪಾಪಂ ಹೇಳಲೆನಗೆ ನಾಲಿಗೆ ಬಾರದು ದಣಿಯೆ.

ಸಾಹೇಬರು :—ಏನಂದ?—ಹೇಳಬಾರದೆ ಗಂಗಾಧರ.—ಹೇಳಬಾರದೆ?

ಗಂಗಾಧರ :—ಹೇಳಲೇ ಬಾಯ್‌ಬರದು—ಹೇಳದಿರೆನೇ ಸ್ವಾಮಿ ದ್ರೋಹ.

ಸಾಹೇಬರು :—ಹೇಳು ಹೇಳು ಗಂಗಾಧರ, ಭಯಪಡದೆ ನಿಜ ಹೇಳು.

ಗಂಗಾಧರ :—"ಹೋಗೋ ಹೋಗೋ, ಅವರ ತಿಥಿಯಾದರೆ ಸೊಂಟ ಕಟ್ಟಿ ನಿಂತೇನು—ಅವರಪ್ಪ ನನಗೇನು ಬಳಗ!" ಎಂದೆನ್ನಬಹುದೆ?

ಸಾಹೇಬರು :—(ಉದ್ರೇಕಗೊಂಡು) ಎಲಎಲಾ ಗೋಮುಖ ವ್ಯಾಘ್ರ! ಇದು ನಿಜವೆ ಗಂಗಾಧರ?

ಗಂಗಾಧರ :—ಸುಳ್ಳಾದರೆ ಸೀಳಿಬಿಡಿ, ಸುಟ್ಟುಬಿಡಿ, ಈ ಸಿಂಗಳೀಕನ. ಬೇಕಾದರೆ ಸುಬ್ಬಣ್ಣನನು ಕೇಳಿ—ಸುಳ್ಳೇನೊ. ಮೊನ್ನೆ ಮಂಗಳವಾರ ಮೂವತ್ತು ಮಾಮೂಲು ತಿಂದ ಆ ಪಂಚಾಕ್ಷರಿ. ಒಂದು ಕಾಸು ತಮ್ಮ ಪಾದವ ಸೇರಿತೆ! ಈ ಗಂಗಾಧರನ ಕೈಗೆ ಮೂರು ಆಣೆ ಬರಲಿ, ತಮ್ಮ ಪಾಲಿನ ಎರಡಾಣೆ ತಂದೊಪ್ಪಿಸಿಲ್ಲವೆ? ಮೊದಲಿಂದ ತಮ್ಮ ಮಾತು ಮೀರದ ಈ ಗಂಗಾಧರನ ಅವರು ಚಾಡಿಯ ಚುಚ್ಚಿ, ಚಿಂತೆಗೀಡು ಮಾಡಿಹರು ಗುರುವೆ. ಸುಮ್ಮನೆ ಬೆಂಕಿ ಕಾರಿ ಕಾಡದಿರಿ.

ಸಾಹೇಬರು :—ಇರಬಹುದು - ಗಂಗೂ--ದುಡುಕಿ ದವಡೆಗಿಕ್ಕಿದೆ ನಾನು— ಪಾಪಿ ಪಂಚಾಕ್ಷರೀ ಹಾಲಿನಲಿ ಹುಳಿ ಹಿಂಡಿ ಕೆಡಿಸಲೆತ್ನಿಸಿದೆಯಾ! ಚಂಡಾಲ!

ಗಂಗಾಧರ :—ತಾವು ಶಿವನಂತಿರುವಿರಿ, ನಾನು ಬಸವನಂತಿರುವೆ ಗುರುವೆ.... ಆ ಭಕ್ತಿ ನಿಮ್ಮಲ್ಲಿ....

ಆಫೀಸರು :—ಶಹಭಾಷ್... ಒಪ್ಪಿದೆ ಗಂಗಾಧರ! ಒಪ್ಪಿದೆ.

ಗಂಗಾಧರ :—ತಾವು ಮಧುಸೂದನನಾದೊಡೆ ಈ ದಾಸ ಗರುಡನಂತಿರುವ. ಮೇಣ್ ತಮ್ಮ ಸವಾರಿ ರಾಮನಾದೊಡೆ. ಈ ವ್ಯಕ್ತಿ ಕೈಮುಗಿದ ಮಾರುತಿರಾಯನಲ್ಲದೆ ಮತ್ತೇನು? ತಾವು ನಾರಾಯಣನಾದೊಡೆ ಮೇಣ್ ನಾನು ನರ (ಪೇತಲ?)ನೆಂಬೆ. ಆ ಭಕ್ತಿ—ತಮ್ಮಲ್ಲಿ.

ಆಫೀಸರು :—ಗಂಗಾಧರಾ—ನಾನೇ ಬಸವನೆಂದೆಂಬೆ. ಆಗ?

ಗಂಗಾಧರ :—ಅಂತಪ್ಪೊಡೆ ಈ ದಾಸನು ಬಾಲವೆಂದೆನಬೇಕು.

ಆಫೀಸರು :—ನಾನೇ ಬಾಲ ಎಂದೊಡೆ?

ಗಂಗಾಧರ :—ನಾನದರ ಕುಚ್ಚಲ್ಲದೆ ಮತ್ತೇನು ಗುರುವೆ?

ಆಫೀಸರು :—ಮೆಚ್ಚಿದೆನು—ಮೆಚ್ಚಿದೆನು ಗಂಗೂ, ಬೇಡಿದಿಷ್ಟವ ಕೇಳು. ಕೇಳಿದಾ ವರ ಕೊಡುವೆ.

ಗಂಗಾಧರ :—ಧನ್ಯ ಧನ್ಯ ವಿಪ್ರಪ್ರದಮಾನ್ಯರೇ—ನಾಧನ್ಯ. ಚಿಕ್ಕ ಕೇಳಿಕೆ ಗುರುವೆ—ಆ ಪಾಪಿ ಪಂಚಾಕ್ಷರಿಯ ಕೊಪ್ಪಕ್ಕೆ ತಳ್ಳಿ.

ಆಫೀಸರು :—ತಥಾಸ್ತು—ತಥಾಸ್ತು.

ಗಂಗಾಧರ :—ಕಡೆಯ ಬೇಡಿಕೆ—ದೇವ—ಪ್ರತಿನಿತ್ಯ—ಇದುವರೆಗೆ ಬಂದ ಮಾಮೂಲು ತಪ್ಪಿಸದೆ ನಡಿಸಿಬಿಡಿ. ಭೋಜನವ ಮಾಡಿ ತಾಂಬೂಲ ಸವಿದು ನಡೆದು ಆಫೀಸು ಸೇರುವೊಡೆ ತೂಕಡಿಕೆ ತಾನೇ ತಾನಾಗಿ ಮತ್ತು ಬಂದಂತೆ ಬರುವುದು ನಿಜವೆ?

ಆಫೀಸರು :—ಸತ್ಯವನೆ ಆಡಿದೆ ಗಂಗೂ ಈ ಅನುಭವವ ಪೊಂದಿರುವೆ.

ಗಂಗಾಧರ :—ಕೆಲಸಕ್ಕೆ ಬಂದೊಡನೆ ರಿಕಾರ್ಡು ರೂಮಿಗೆ ತೆರಳಿ—ಕಂತೆ ಕಂತೆ ಕಟ್ಟನ ನಡುವೆ ಹಾಯಾಗಿ ಮಲಗಿರಲು ಆ ನೀಚ ರಿಕಾರ್ಡು ಕೀಪರು ಬಂದು ಕಿವಿಯಲ್ಲಿ ಜಲಬಿಡುವ—ಆ ತಿಗಣೆಯಂತಿರುವ ರಿಕಾರ್ಡ್ ಶಾಸ್ತ್ರಿಯನು ಹಾಗೆ ಮಾಡದಿರೆಂದು ಬೆದರಿಸುವಿರಾ! ಜುಲ್ಮಾನೆಯನೆ ಹಾಕಿ ಹೊಡೆದಟ್ಟಿಬಿಡುವೆನೆಂದು ಫಾಲನೇತ್ರವ ಬಿಟ್ಟು ಬೈಯ್ಯುವಿರಾ?

ಆಫೀಸರು :—ತಥಾಸ್ತು — ಆದರೇ ೯ ೯.

ಗಂಗಾಧರ :—ಆಧರೇನು ಅಪ್ಪಣೆಯಾಗಲಿ ಪ್ರಭುವೆ.

ಆಫೀಸರು :—ಆದರೇ—ನಾಮೊದಲು ಜಾಗ ಆಕ್ರಮಿಸಿ ನಾಲ್ಕು ಘಂಟೆಗೆ ಎದ್ದು ಹೊರಬೀಳುವೆ—ಆ ಮೇಲೆ ನೀನಲ್ಲಿ ಪವಡಿಸು ತಿಳಿಯಿತೆ?

ಗಂಗಾಧರ :—ತಮಗೇಕೆ ಆ ಹೊಲಸು ಜಾಗ?—ಅದರ ಪಕ್ಕದಾ ಸಾಲಿನಲಿ ಆ ಶಾಸ್ತ್ರಿ—ರಿಕಾರ್ಡು ಗಂಟನು ಬಿಚ್ಚಿ, ಆ ಕಾಗದವನೇ ಹರಡಿ ಸುಪ್ಪತ್ತಿಗೆಯ ಮಾಡಿಕೊಂಡಿರುವ—ಅಲ್ಲಿ ಹಾಯಾಗಿ ಪವಡಿಸಿದರುತ್ತಮವಲ್ಲವೆ? ನಮ್ಮಿಬ್ಬರಿಗೂ ಅನುಕೂಲ—ಒಬ್ಬರ ತಂಟೆ ಬೇಡ.

ಆಫೀಸರು :—ಶಹಭಾಷ್—ಮೆಚ್ಚಿದೆನು ತಥಾಸ್ತು ತಥಾಸ್ತು ತಥಾಸ್ತು.

[ಪರದೆ]

—ದಾಶರಥಿ ದೀಕ್ಷಿತ್.

—— o ——



ಆಹಾರ ಮಂತ್ರಿಗಳ ನಾಟ್ಯಾಭಿನಯ

ಪ್ರಂತ್ರಿ

" ಮೊನ್ನೆ ನಮ್ಮೂರಿಗೆ ಡಿ.ಸಿ. ಬಂದು ಟೀ.ಬೀಲಿದ್ದಾಗ........"

" ಯಾರು ಯಾರು ಸೀ. ಸಿ. ಮಾಡಿದರು ? "

ಈ ಸಂಭಾಷಣೆಯನ್ನು ಕೇಳಿದಾಗ, ನನಗೆ, ನಮ್ಮ ಕಚೇರಿ ಕನ್ನಡದಲ್ಲಿ ಇನ್ನೂ ಉಳಿದು ನಿಂತಿರುವ ಆಂಗ್ಲ ಅಕ್ಷರ ಮಾಲೆಯ ಅನಾಹುತ ನೆನಪಿಗೆ ಬಂತು. ಯಾವ ಕಚೇರಿಗೆ ಹೋದರೂ, ಡಿ.ಇ.ಓ., ಡಿ.ಎಂ.ಓ,, ಡಿ.ಎಫ್.ಓ., ಡಿ.ಟಿ.ಎಸ್., ಐ.ಜಿ.ಪಿ., ಎ.ಎಸ್.ಪಿ., ಡಿ.ಎಸ್.ಪಿ., ಎಸ್.ಐ., ಟಿ.ಟಿ.ಸಿ., ಎಂದು ವ್ಯವಹರಿಸುತ್ತಿರುತ್ತಾರೆ. ಸೆಕ್ಷನ್ ಸೂಪರಿಂಟೆಂಡರು ಎಸ್ಸ್.ಎಸ್ಸಾದರೆ, ಅವರ ಅಸಿಸ್ಟೆಂಟರು ಎ.ಎಸ್.ಎಸ್‌ರು. ಐಜಿಗೊಬ್ಬ ಐ.ಐ.ಜಿ. ಇದ್ದೇ ಇರುತ್ತಾರೆ. ಎಲ್ಲ ಡಿ.ಸಿ. ಗಳಿಗೂ ಒಬ್ಬ ಪಿ.ಎ. ಒಬ್ಬ ಸೀಸಿ., ಒಬ್ಬ ಪಿ.ಸಿ. ಸಿದ್ಧ.

ಕಚೇರಿಗಳಿಗೂ ಅಕ್ಷರಮಾಲೆ ಉಂಟು. ಸಿ.ಇ. ಆಫೀಸ್, ಸಿ.ಎಫ್. ಆಫೀಸ್, ಆರ್.ಸಿ. ಕಚೇರಿ, ಹೆಚ್.ಟಿ., ಡಿ.ಟಿ., ಡಿ.ಐ, ಇ.ಎಡಿ. ಅದರಲ್ಲೊಂದು ಸೀ.ಬಿ., ಎಂ.ಸಿ., ಪಿ.ಎ.ಓ., ಇತ್ಯಾದಿ ಗುಪ್ತ ನಾಮಧೇಯಗಳು, ಗುಮಾಸ್ತರ ಗುಂಪಿನಲ್ಲಿ ಹೆಚ್ಚು ಬಳಿಕೆ.

ಇದನ್ನೆಲ್ಲ ಮೀರಿಸಿದ ಅಕ್ಷರಮಾಲಾಪ್ರಯೋಗವೆಂದರೆ, ರೈಲ್ವೆ ಇಲಾಖೆಯವರದು. ಅವರು ಬೆಂಗಳೂರನ್ನೇ ಎಸ್.ಬಿ.ಸಿ. ಎಂದು ಮಾರ್ಪಡಿಸಿ, ಪತ್ರವ್ಯವಹಾರ ನಡೆಸುತ್ತಾರೆ. ಅರಸಿಕೆರೆಗೆ ಎಕ್ಸ್‌ವೈಸೆಡ್ ಎಂದು ಅವರು ಹೇಳಿದರೂ ಹೇಳಿಬಿಡಬಹುದು. ಯಾವುದಾದರೂ ಮೂರು ಅಕ್ಷರಗಳನ್ನು ಯಾವ ಊರಿನ ಹಣೆಗೂ ಲಗತ್ತಿಸಲು ಅವರು ಹಿಂಜರಿಯುವುದಿಲ್ಲ.

ಇಂಗ್ಲೀಷು ಭಾಷೆಗೆ ಎಳ್ಳು ನೀರು ಬಿಟ್ಟಮೇಲೆ ನಮಗೆ ಇದೊಂದು ತಲೆನೋವು ಅಂಟಿ ನಿಂತಿದೆ. ಮುಖ್ಯೋಪಾಧ್ಯಾಯರಿಗೆ–ಮು–ಧ್ಯಾ ಎನ್ನೋಣವೆ ? ಪ್ರಧಾನ ಮಂತ್ರಿಗೆ ಸೀ.ಎಂ. ಎಂಬುದನ್ನು ತೊರೆದು, ಪ್ರಂತ್ರಿ ಎನ್ನೋಣವೆ ?

— ಗಂಗಾಧರ

— o —

ವಾದ

ನಮ್ಮೂರಲ್ಲಿ ಲಾಯರುಗಳಿಗೇನೂ ಬರವಿಲ್ಲ. ಬೀದಿ ಬೀದಿಗೂ ಬೋರ್ಡು ಗಳು ತಗುಲಿಸಿದಾರೆ. ಆದರೆ, ಮೊನ್ನೆ ನನ್ನ ಕೇಸು ನಡೆಸಿದರಲ್ಲಾ, ಒಬ್ಬರು, ಅವರ ಬುದ್ಧಿಗೆ ಏನು ಕೊಟ್ಟರೂ ಸಾಲದು. ಯಾವ ಪಟ್ಟಿಗೂ ತಲೆ ತಗ್ಗಿಸದ ಪೈಲ್ವಾನ ಅಂದರೆ, ಅವರು. ವಾಸವಾಗಿದ್ದ ಮನೆಗೆ ಬಾಡಿಗೆ ಕೊಡಲಿಲ್ಲ ಅಂತ ನನ್ನ ಮೇಲೆ ವಾರಂಟ್ ಹೊರಡಿಸಿದ್ದರು. ದೇವರೇ ನನ್ನನ್ನು ಅವರ ಹತ್ತಿರಕ್ಕೆ ಕಳುಹಿಸಿದ, ಅನ್ನಿ. ಹೋಗಿ, ವಿಷಯ ಹೇಳಿ, ಹೇಗಾದರೂ ಬಿಡಿಸಿ ಬದುಕಿಸಬೇಕು. ಬಡವ, ಅಂದೆ. ಕೇಸು ಕೂಗಿದಾಗ, ಎದ್ದು ನಿಂತು, ಗಂಟಲು ಸರಿಪಡಿಸಿ, ತೆಗೆದರು ವರಸೇನ. "ಸ್ವಾಮಿ! ನನ್ನ ಕಕ್ಷಿಗಾರ ವಾದಿಯ ಮನೆಯನ್ನು ಬಾಡಿಗೆಗೆ ಕೊಡಬೇಕೆಂದು ಯಾವತ್ತೂ ಕೇಳಲೇ ಇಲ್ಲ. ಅಥವಾ, ಒಂದುವೇಳೆ ಆತ ಕೇಳಿದ್ದ ಅಂತ ನಾನೊಪ್ಪಿಕೊಂಡರೂ, ಆತನಿಗೆ ಅದನ್ನು ಬಾಡಿಗೆಗೆ ವಾದಿ ಯಾವತ್ತೂ ಕೊಡಲೇ ಇಲ್ಲ. ಅಥವಾ, ಕೊಟ್ಟಿದ್ದರೂ, ಪ್ರತಿವಾದಿ ಅದರಲ್ಲಿ ಯಾವತ್ತೂ ವಾಸಮಾಡಲೇ ಇಲ್ಲ. ಅಥವಾ, ಆ ಮನೆಯಲ್ಲಿ ನನ್ನ ಕಕ್ಷಿಗಾರ ವಾಸಮಾಡಿದ್ದರೂ, ಸಲ್ಲತಕ್ಕ ಬಾಡಿಗೇನೆಲ್ಲ ಯಾವತ್ತೋ ಕೊಟ್ಟು ತೀರಿಸಿದಾರೆ. ಅಥವಾ, ಕೊಟ್ಟು ತೀರಿಸಲಿಲ್ಲ ಎಂದು ವಾದಿ ಹೇಳುವುದಾದರೆ, ಅದನ್ನು ಕೊಡುವುದಕ್ಕೆ ನಾವು ಯಾವತ್ತೂ ಒಪ್ಪಲಾರೆವು. ಏಕೆಂದರೆ, ಆ ಮನೆ ವಾದಿಯದೇ ಅಲ್ಲ; ಅಥವಾ, ಆಗಿದ್ದರೂ, ಅವನಿಗೆ ಅದರ ಬಾಡಿಗೆ ಪಡೆಯುವ ಹಕ್ಕಿಲ್ಲ; ಇದ್ದರೂ, ಬಾಡಿಗೆ ಎಷ್ಟು ಎಂದು ಗೊತ್ತುಮಾಡಿಲ್ಲ; ಮಾಡಿದ್ದರೂ, ಗೊತ್ತುಮಾಡಿರುವ ಬಾಡಿಗೆ ಹೆಚ್ಚು; ಹೆಚ್ಚಿಲ್ಲವೆಂದು ಕೋರ್ಟಿಂದ ತೀರ್ಮಾನ ಮಾಡಲ್ಪಟ್ಟರೂ; ಅದನ್ನು ಕೊಡಲು ಪ್ರತಿವಾದಿಗೆ ಶಕ್ತಿ ಇಲ್ಲ; ಶಕ್ತಿ ಇದ್ದರೂ, ಕೊಟ್ಟು ತೀರಿಸಾಯಿತು; ತೀರಿಸಿ ಮುಗಿಸಿಲ್ಲವೆಂದರೆ, ಅದನ್ನು ಬಾಡಿಗೆಗೆ ತೆಗೆದುಕೊಂಡೇ ಇಲ್ಲ" ಎಂದರು. ಅದೀಗ ಜಾಣತನ; ಮೆಟ್ಟಲು ಮೆಟ್ಟಲಾಗಿ, ವಾದಿ ಮುಖಾನ ಮುರೀತಾ ಬಂದರು. ನ್ಯಾಯಪತಿಗಳು ನನ್ನನ್ನ ಬೋನೊಳಕ್ಕೆ ಸೇರಿಸಿ, "ನೀನು ಏನು ಹೇಳುತ್ತೀಯಾ?" ಎಂದರು ನಮ್ಮ ಲಾಯರ ಮಾತು ಕೇಳಿದ ಮೇಲೆ ಏನು ಹೇಳುವುದು ಅನ್ನೋದೇ ತೋಚೋದಿಲ್ಲ ಸ್ವಾಮಿ!" ಅಂದೆ. "ನನಗೂ ಹಾಗೆಯೇ ಆಗಿದೆ; ಮುಂದಿನ ತಿಂಗಳಿಗೆ ಅಡ್ಜರ್ನ್ ಮಾಡಿದೇನೆ" ಅಂದರೂ ಪುಣ್ಯಾತ್ಮರು, ತಲೆ ಕೆರೆದುಕೊಳ್ಳುತ್ತಾ.

—o—

ಷಡನ ಷೂಜುಗಳು

ವ್ಯೃಥ್ಥಿ ಮದುವೆ ಬೀಗರು ಬರದೇ ಇದ್ರೂ ನಡೀತಿತ್ತು. ಆದರೆ ನಮ್ಮ ಷಡ ಬರದೇ ಇದ್ದರೆ ನಿಂತೇ ಹೋಗುತ್ತಿತ್ತು ಎನ್ನುವುದು ಬರೀ ಹೊಗಳಿಕೆಯ ಮಾತಲ್ಲ. ಏಕೆಂದರೆ ನಮ್ಮ ವಲಯದ ಅನೇಕ ಮದುವೆಗಳಲ್ಲಿ ಆತ ತೋರಿರುವ ಉಸ್ತುವಾರಿಯ ದಕ್ಷತೆ ಅಸಾಧಾರಣವಾದುದು.

ಮದುವೆ ಗಲಾಟೆಯ ಎಲ್ಲ ಇಲಾಖೆಗಳ ಮೇಲ್ವಿಚಾರಣೆಗೂ ಹೇಗಾದರೂ ಆಸಾಮಿಗಳು ಸಿಕ್ಕೇ ಸಿಕ್ಕುತ್ತಾರೆ. ಕಿರ್ಚ ಇಲಾಖೆ ನನಗಿರಲಿ—ನನಗಿರಲಿ ಅಂತ ಕನ್ಯಾ ಬಳಗದವರು ಮಾತ್ರವಲ್ಲದೆ ಬೀಗರ ಬಳಗದವರೂ ಕ್ಯೂ ನಿಲ್ಲುತ್ತಾರೆ. ಪರ್ಚೇಸಿಂಗ್ ನಮಗೆ ಬಿಟ್ಟುಬಿಡಿ ಅಂತ ಅಳಿಯನ ಗೆಳೆಯರೇ ಮುಂದೆ ಬರುವುದು ಹೊಸತೇನಲ್ಲ. “ಕಬ್ಬನ್‌ಪೇಟೆಯ ಕದೀಮರೆಲ್ಲ ನನಗೆ ಗೊತ್ತು. ರೇಷ್ಮೆ ಸೀರೆ—ಕಣದಲ್ಲಿ ಶೇಕಡಾ ೨೫ ಉಳಿಸಿ ಕೊಡುತ್ತೇನೆ” ಎಂದು ಆ ನಿರ್ಭಾಗ್ಯ ಕನ್ಯೆಯ ಮಾವನೆನಿಸಿಕೊಂಡವನೇ ಮುಂದೆ ಬಂದರೂ ಬಂದ.

ಆದರೆ ಮದುವೆ ಪಾರ್ಟಿಯ ಪಾದರಕ್ಷಾವಳಿಯ ಉಸ್ತುವಾರಿಗೆ ದಕ್ಷನಾದ ಮೇಲ್ವಿಚಾರಣಾಧಿಕಾರಿ ದೊರಕುವುದು ದುರ್ಲಭವೆಂಬುದನ್ನು ಹರಿಕಥೆ, ಪಾಟು ಕಛೇರಿಗಳ ಅನುಭವವಿರುವ ಮಹನೀಯರೆಲ್ಲರೂ ಒಪ್ಪಲೇಬೇಕು.

ಇಂತಹ ಕಷ್ಟತಮ ಪೋರ್ಟ್‌ಫೋಲಿಯೋ ವಹಿಸಿಕೊಳ್ಳಲು ಷಡ ತಾನಾಗಿಯೇ ಮುಂದೆ ಬಂದದ್ದು ಮದುವೆ ಮನೆಯ ಕೆಲವಲಯಗಳಲ್ಲಿ ಆಶ್ಚರ್ಯವನ್ನೂ ಕೆಲವಲಯಗಳಲ್ಲಿ ಶಂಕೆಯನ್ನೂ ಎಬ್ಬಿಸಿತು. ಮೆಟ್ಟುಗಳ ಮೇಲ್ವಿಚಾರಣೆಯಲ್ಲಿ ಷಡನ ದಕ್ಷತೆ, ಮುತುವರ್ಜಿ ಹೇಗಿತ್ತೆಂಬುದನ್ನು ವಿಮರ್ಶಿಸುವ ಬದಲು ಮದುವೆ ಮುಗಿದಾಗ ಒಂದು ಜೊತೆ ಹೊಸಾಹೊಸ ಸಾಂಬಾರ್ ಲೆದರ್ ಷೂಜುಗಳು ಗೈರಾಗಿದ್ದುವೆಂಬುದು ತಿಳಿದರೆ ಸಾಕು.

ಷೂಜು ಕಳೆದುಕೊಂಡ ನತದೃಷ್ಟ ಪಾತಕಿಯನ್ನು ಪತ್ತೆ ಹಚ್ಚಲು ಪಡಬಾರದ ಪ್ರಯತ್ನ ಪಟ್ಟ. ಬೀಗರ ಕಡೆಯದೊಂದು ಸರ್ಚ್ ಪಾರ್ಟಿಯನ್ನೇ ಛೂ ಬಿಟ್ಟ. ಗಿಟ್ಟಲಿಲ್ಲ. ಕೊನೆಗೆ ತನ್ನೂರಿನ ತಮ್ಮ ಅಮಲ್ದಾರ್ ಸಾಹೇಬರಿಗೆ ಮೂರು ದಿನ ರಜಾ ಅರ್ಜಿ ಬರೆದು ಹಾಕಿ ಬೆಂಗಳೂರು ಪೇಟೆಯ ಗಲ್ಲಿಗಳನ್ನೆಲ್ಲಾ ಸುತ್ತಿ ಕಂಡ ಕಂಡ ಕಾಲುಗಳ ಕಡೆಗೆಲ್ಲಾ ಕಾಕದೃಷ್ಟಿ ಬೀರಿದ.

ಗುಮಾನಿ ಕೂಡ ಸಿಕ್ಕಲಿಲ್ಲ. ಯಾರೋ ಒಬ್ಬ ಸಾಂಬಾರ್ ಷೂಜುಧಾರಿಯನ್ನು ಬಹುದೂರ ಹಿಂದಿನಿಂದ ಬಾಲಿಸಿಕೊಂಡು ಹೋಗಿ, ಕೊನೆಗೆ ಹೇಗೋ ಆತನನ್ನು ಪರಿಚಯಮಾಡಿಕೊಂಡು 'ಸಾಂಬಾರ್ ಸಂಭಾಷಣೆ' ಶುರು ಮಾಡಿದ. ಆತ ತಾಳ್ಮೆ ಮೀರಿದಾಗ ಎರಡು ಬಲವಾಗೇ ತಟ್ಟಿದ. ಪ್ರಾಣಿ ಅದೇ ರಾತ್ರಿ ಊರಿಗೆ ಗಂಟುಕಟ್ಟಿದ.

ಈ ಮಧ್ಯೆ ಷಡ ತನ್ನದೂ ಒಂದು ಜೊತೆ ಷೂಜುಗಳನ್ನು ಯಾರೋ ಪಾಪಿಗಳು ಕದ್ದರೆಂದು ಪುಕಾರೆಬ್ಬಿಸಿದ. ಈ ಕಳುವಾದದ್ದೂ ನಿಜವೇ. ಆದರೆ ಇದರಲ್ಲಿ ಸ್ವಲ್ಪ ನ್ಯಾಯವಿತ್ತು.

ಏಕೆಂದರೆ ಷಡ ಕಾಳುವಿನ ಹತ್ತಿರ ಇಸುಕೊಂಡ ೩ ರೂಪಾಯಿ ವಾಪಸು ಮಾಡಲು ತುಂಬಾ ಸತಾಯ್ಸಿ ಕೊನೆಗೂ ಕೊಡಲಿಲ್ಲ. ಕಾಳು ಸಮಯ ಕಾದು ಹಾರಿಸಿಯೇ ಬಿಟ್ಟ. ಯಶಸ್ವಿಯಾಗಿ ಬಚ್ಚಿಟ್ಟೂ ಇಟ್ಟ. ತಲಾಷ್ ಮಾಡೀ ಮಾಡೀ ಸುಸ್ತಾಗಿ ಷಡನೂ ರೈಲು ಹತ್ತಿದ.

ಆದರೆ ಈ ಸಾರಿ ದಸರಾ ಎಗ್ಜಿಬಿಷನ್ನಿನಲ್ಲಿ ಷಡನ ಷೂಜನ್ನು ಹಾರಿಸಿದ ಕಾಳು ಸಿಕ್ಕಿಬಿದ್ದೇ ಬಿಟ್ಟ. ಷೂಜು ಸಮೇತ ಆಸಾಮಿಯನ್ನು ಷಡ ಕೂಡಲೇ ಇಂದ್ರ ಭವನಕ್ಕೆ ಕೊಂಡೊಯ್ದು ಬಜ್ಜಿ, ಬಾದಾಮಿ ಹಾಲು ಹಾಕಿಸಿ ಒಳ್ಳೇ ಮಾತಿನಲ್ಲಿಯೇ ಕೇಳಿದ. ಕಾಳುವೂ ನ್ಯಾಯವಾದಿ. "ಅಪ್ಪಾ, ೧ ವರ್ಷ ಅನುಭವಿಸಿದ್ದೇನೆ. ನಿನ್ನ ೨೫ ರೂಪಾಯಿ ಷೂಜುಗಳನ್ನ. ನನ್ನ ಮೂರು ರೂಪಾಯಿ ಬಡ್ಡಿ ಸಮೇತ ಬಂತು" ಎಂದು ಹೇಳುತ್ತ ಷೂಜುಗಳನ್ನು ಅಲ್ಲೇ ಕಳಚಿ ಕೈಲಿದ್ದ ವೃತ್ತಪತ್ರಿಕೆಯಲ್ಲಿ ಕಟ್ಟಿಕೊಟ್ಟ. ಷಡ ಹಾಗೆಯೇ ಮನೆಗೊಯ್ದು ಹಗುರವಾದ ಹೃದಯದಿಂದ ಪೊಟ್ಟಣ ಬಿಚ್ಚಿದ. ಅದೇ ಸಾಂಬಾರ್ ಷೂಜು, ಅದೇ ಡಿಜೈನು, ಅದೇ ಹೊಲಿಗೆ, ಅದೇ ನಾಲಿಗೆ. ಆದರೆ ಎರಡಕ್ಕೂ ತಳವಿರಲಿಲ್ಲ ಅಷ್ಟೇ. ಷಡ ಎದೆಗೆಡದೆ ಅಂದೇ ರೀಸೋಲ್ ಮಾಡಿಸಿ ಮೂರನೇ ದಿನವೇ ಕಾಲಿಗೇರಿಸಿಕೊಂಡು ರೀವಿಯ 'ಗಿರಕ್-ಗಿರಕ್' ಶಬ್ದದೊಡನೆ ಎಗ್ಜಿಬಿಷನ್ನಿಗೆ ನುಗ್ಗಿದ. ನಾಲ್ಕು ರೌಂಡ್ ಹಾಕಿದ. ಕಂಡ ಕಂಡವರಿಗೆಲ್ಲಾ ಷೂಜುಗಳ ವರ್ಣನೆ ಮಾಡಿದ. ಆ ನಶ್ಯದ (ಕಲರಿನ) ಸೂಟಿಗೂ ಈ ಅದ್ಭುತ ಷೂಜುಗಳಿಗೂ ಏನು ಮ್ಯಾಚೂ : ಛೆ ಛೆ! ಎಂದರು ಗೆಳೆಯರು.

ಇನ್ನೇನು ಎಗ್ಜಿಬಿಷನ್ ಬಿಟ್ಟು ಬರುವಾಗ ಕೊನೇ ರೌಂಡಿನಲ್ಲಿ ಹಿಂದಿನಿಂದ ಒಂದು ಪರಿಚಿತ ಆರ್ತ ಸೂಚಕ ಧ್ವನಿ ಕೇಳಿಸಿತು—"ಸಾರ್, ಒಂದು ನಿಮಿಷ. ಗುರುತು ಸಿಕ್ಕಿತೇ? ನಾನೇ! ವೈಧ್ಯಿ ಮದುವೆಯಲ್ಲಿ ಪರಿಚಯವಾಯಿತಲ್ಲಾ" ಎಂದು ಮುಂತಾಗಿ ಪೀಠಿಕೆ ಹಾಕಿ, ಕೊನೆಗೆ "ಇಷ್ಟು ದಿವಸ ಸುಮಾರು ೧೨

ತಿಂಗಳಕಾಲ ನೀವು 'ನನ್ನ' ಷೂಜುಗಳನ್ನು ಇಷ್ಟು ಸ್ವವಸ್ತು-ಮಮತೆಯಿಂದ ಅಚ್ಚಳಿಯದಂತೆ ಕಾಪಾಡಿಕೊಂಡು ಬಂದಿರುವುದಕ್ಕೆ ನಾ ಕೃತಜ್ಞ. ನೀವಲ್ಲದೆ ಬೇರೆ ಯಾರಕ್ಕೈಗಾದರೂ ಸಿಕ್ಕಿದ್ದರೆ, ಆ ಷೂಜುಗಳ ಗತಿ....ಸೋಮೇಶ್ವರಾ!"....

"What do you mean, I say? ನಿಮಗೇ್ಱ ಬುದ್ಧಿಗಿದ್ಧಿ ನೆಟ್ಟ ಗಿದೆಯೋ ಇಲ್ರೀ? ಯಾರ ಹತ್ತಿರ ಮಾತಾಡ್ತಿದೀರಿ? ಹುಷಾರ್, ಹಪ್ಪಮಾಡಿ ಹಾಕಿಬಿಟ್ಟೇನು (ಎಂದು ಎರಡು ಅಂಗೈಗಳನ್ನು ಸೇರಿಸಿ 'ಅಪ್ಪಚ್ಚಿ' ಪ್ರದರ್ಶನ ಮಾಡಿದ) ಖಬರ್‌ದಾರ್" ಎಂದು ಮುಂತಾಗಿ ಷಡ ತನ್ನ ಮಾಮೂಲು ಪೋಲೀಸ್ ರೋಪು ಹಾಕಿದ. ಪ್ರಾಣಿ ಕೊಂಚ ಹೆದರಿತಾದರೂ ಬಿಡಲಿಲ್ಲ.

"ಹೋಗಲಿ ಬಿಡಿಸಾರ್. ನಿಮಗೇಕೆ ಇಷ್ಟು ಕೋಪ? ಇದ್ದದ್ದು ಇದ್ದ ಹಾಗೇ ಹೇಳಿದರೆ ಶಿದ್ದಪ್ಪನಿಗೆ ಶಿಡ್ಲುಬಡೀತು ಅಂದ ಹಾಗೆ........ಆದರೆ ನನ್ನ ಷೂಜುಗಳಿಗೆ ಒಂದು ಗುರುತಿತ್ತು. ಅದಿಲ್ಲದಿದ್ದರೆ ಇದು ನಿಮ್ಮದೇ—ಏಕೆಂದರೆ ನೀವೂ ಒಂದು ಜೊತೆ ಕಳೆದುಕೊಂಡಿರಲ್ಲಾ ಪಾಪ—ಒಂದಕ್ಕೊಂದು ಅದಲು ಬದಲಾಗಿರಬಹುದು. ಅದೇ ತರಹಾ ಇದ್ದದ್ದರಿಂದ ಹಾಗೆ ಹೇಳಿದೆ. ಏನ್ನಾ ದರೂ ಸ್ವತ್ತುಹೋದ ಸಂಕಟ" ಎಂದಿತು ಪ್ರಾಣಿ.

"ರೀ ಸೋಲ್ ಮಾಡಿದ ಮೇಲೇನಿರುತ್ತೆ ಮಣ್ಣು, ತೆಗೆದು ತೋರಿಸೋಣ, ಏನು ತೋರಿಸ್ತಾನೋ ತೋರಿಸ್ಲಿ ಗುರ್ತು ಇವನ ಪಿಂಡ! ಆ ಮೇಲೆ ಪೆಚ್ಚಾ ದಾಗ ಎರಡು ತಟ್ಟೆ ಕಳುಹಿಸಿದರಾಯಿತು" ಎಂದುಕೊಂಡು ಷಡ ಒಂದು ಕಾಲಿನ ಷೂಜು ಕಳಚಿದ. ಆತ ಕಂಠದ ದಾರ ಬಿಚ್ಚಿ ನಾಲಗೆಯ ಅಂಟಿದ ಎರಡು ಪದರಗಳನ್ನು ಉಗುರಿನಿಂದ ಬಿಡಿಸಿ ಸಿಗಿದ. ಒಳಗಿನ ಬಿಳೀ ಜಾಗದಲ್ಲಿ ಅಗಸರ ಗೇರೆಣ್ಣೆಯಿಂದ ಬರೆದ ಹಾಗೆ ಸ್ಪಷ್ಟವಾಗಿ "ಇವು ಕಪಿನೀಪತಯ್ಯನ ಷೂಜುಗಳು" ಎಂದು ಬರೆದಿತ್ತು ಕನ್ನಡದಲ್ಲಿ. ಬಲಗಾಲಿಂದೂ ಬಿಚ್ಚಿ ಬಿಸಾಕಿದ. ಅದರಲ್ಲೂ ಡಿಟೋ.

* * *

[ನಮ್ಮ ಮಾದರಿ ಮೈಸೂರಿನಲ್ಲಿ ಷಡಗೋಪ ಎಂಬುವರೊಬ್ಬರಿದ್ದು, ಅವರ ಪ್ರಿಯ ಸಂಬೋಧನೆ 'ಷಡ' ಆಗಿದ್ದು, ಅವರು ವೃದ್ಧಿ ಎಂಬ ಕನ್ಯೆಯ ಮದುವೆಯಲ್ಲಿ ಚಪ್ಲಿ ಇಲಾಖೆ ಉಸ್ತುವಾರಿ ವಹಿಸಿದ್ದು, ನತದೃಷ್ಟ ಕಪಿನೀ ಪತಯ್ಯನ ಈ ನಾಂಬಾರ್ ಷೂಜುಗಳ ಸುಖಾಂತ ಪ್ರಸಂಗದಲ್ಲಿ ಷಡ ವಿಷಾ ದಾಂತ ಸನ್ನಿವೇಶಕ್ಕೆ ಸಿಕ್ಕಿದ್ದಾರೆ, ಅದಕ್ಕೆ ಲೇಖಕ ಹೊಣೆಯಲ್ಲ. ಆದರೆ ಸಿಂಪತಿಯುಂಟು. ಛೆ ಪಾಪ!]

—ಟೀಯೆಸ್ಸಾರ್ರಾವ್.

———o———

ಹೊಸ ಕನ್ನಡ ಗಾದೆಗಳು

ಹೊಸದರಲ್ಲೇ ಅಗಸ ಹೊಳೇಲಿ ತೇಲಿಸಿದ

ಉಳುವವನೊಬ್ಬನಾದರೆ, ಉತ್ಸಾಹ ಕೊಡುವವರು ನೂರು ಜನ.

ತಿನ್ನುವುದಕ್ಕೆ ಕೂಪನು, ಉಡುವುದಕ್ಕೆ ಕೌಪೀನ.

ಹಸಿದ ಗುಮಾಸ್ತೆಗೆ ಲಂಚವೇ ಪಂಚಭಕ್ಷ್ಯ

ಸಾವಿರತನಕ ಸಾಲ, ಅದರ ಮೇಲೆ ಸಬೂಬು

ಸರ್ವ ಸಂಗ ಪರಿತ್ಯಾಗ, ಸಂಬಳ ಎರಡೂವರೆ ಸಾವಿರ

ಶೆಟ್ಟರ ಬಂಡವಾಳ, ಕತ್ತಲಲ್ಲದೆ ತಿಳಿಯದು

ಕೂಪನ್ ಕಾಲದಲ್ಲಿ ಉಂಡವನೇ ಜಾಣ

ಅಲ್ಪನಿಗೆ ಅರ್ಥ ಸಿಕ್ಕರೆ, ಅಮೇರಿಕನ್ ಕಾರು ಕೊಂಡ.

ಮಹಾಸಂಕಲ್ಪ ಮಾಡೋದರೊಳಗೆ, ಪುಣ್ಯಕಾಲ ದಾಟಿಹೋಯ್ತು

ಬೆಣ್ಣೆ ಇಟ್ಟುಕೊಂಡು, ಚಾಕರಿಗೆ ಅಲೆದರು.

ದಣಿಯಾದೋನು, ಅತ್ತರೂ ಕಷ್ಟ, ಇತ್ತರೂ ಕಷ್ಟ.

ಗೆದ್ದ ಎತ್ತಿನ ಬಾಲಾನ ಗೊದ್ದ ಹಿಡಿದ ಹಾಗೆ.

ಹೇಳೋನಿಗೆ ಹೆಡ್ಡಿಲ್ಲದಿದ್ದರೆ, ಕೇಳೋನ ತಲೇಲಿ ಮಡ್ಡೇ ?

ಸವರಿನ್ನಿ ಗಂಜಿ, ಚವರ ಮಾಡಿಸಿಕೊಂಡ

—o—

ಅಲ್ಲಾದದ್ದು

(ಹೀಗೆಂದವರ ಕ್ಷಮೆ ಬೇಡಿ)

ರಾಜೀವ ಪುರದಲ್ಲಿ ಆ ದಿನ ಅತಿ ಸಂಭ್ರಮ. ದೇಶನಾಯಕರೆಲ್ಲರೂ ಆ ಹಳ್ಳಿಗೆ ಆ ದಿನ ಬಿಜಯಮಾಡಿ, ಆ 'ಗ್ರಾಮದ ಉದ್ಧಾರ' ಕಾರ್ಯಕ್ರಮವನ್ನು ಅಮೃತ ಹಸ್ತಗಳಿಂದ ಮಾಡಬೇಕಾಗಿತ್ತು. ಅದಕ್ಕಾಗಿಯೇ ಹಳ್ಳಿಯ ಹಿರಿಯರೆಲ್ಲಾ ಗಾಂಧಿ ಮೈದಾನದಲ್ಲಿ ನೆರೆದಿದ್ದರು. ಕಾರ್ಯಕಲಾಪಗಳು ಶುರುವಾದುವು. ಸ್ವಾಗತ ಭಾಷಣ ಬಲು ರುಚಿಯಾಗಿತ್ತು. ಅದರ ಸಾರಾಂಶವನ್ನೇ ಇಲ್ಲಿ ಕೊಟ್ಟಿದ್ದೇವೆ.

"ಮಾನ್ಯ ನಾಯಕರೇ! ರೈತ ಬಂಧುಗಳೇ, ಈ ದಿನ ನಮ್ಮ ನವಮಣಿಗಳಂತಿರುವ ದೇಶದ ನಾಯಕರನ್ನು ನಮ್ಮ ಈ ಗ್ರಾಮಕ್ಕೆ ಬರಮಾಡಿಕೊಳ್ಳಲು ಸಹಾಯಮಾಡಿದ ಪರಮೇಶ್ವರನಲ್ಲಿ ನನ್ನ ಮೊದಲ ಧನ್ಯವಾದಗಳು. ನಂತರ ನಮ್ಮ ಕೂಗಿಗೆ 'ಓ ಓ' ಎಂದು ಒಂಭತ್ತು ಬಾರಿ ಓ ಕೊಟ್ಟು ನಮಗೆ ನಮ್ಮ ಕಾರ್ಯದ ಅರಿವನ್ನುಂಟು ಮಾಡಿಕೊಡಲು ಬಂದ ಮಾನನೀಯರಿಗೆ ನನ್ನ ಅನಂತ ಕೃತಜ್ಞತೆಗಳು. ನಮ್ಮ ಗ್ರಾಮದ ವಿಚಾರ ಹೆಚ್ಚು ಹೇಳಲಾರೆ. ನೋಡಿ ಇಲ್ಲಿಂದ ಕಾಣುವ, ಕವಲೊಡೆದಿರುವ ಮೂರು ಮೊಂಡು ಹಾದಿಗಳೇ ಇಲ್ಲಿನ ರಸ್ತೆಗಳು. ಇಲ್ಲಿರುವ ಮನೆಗಳೆಲ್ಲಾ ಇಲ್ಲಿಗೇ ಚೆನ್ನಾಗಿ ಕಾಣಬರುತ್ತಿವೆ. ಇಂತಹ ಸಮಯದಲ್ಲಿ ನಮ್ಮ ಗ್ರಾಮದ ಕೊರತೆಗಳನ್ನು ಹೇಳಿಕೊಳ್ಳುವುದು ವಾಡಿಕೆ. ನಮಗೆ ಒಂದೇ ಕೊರತೆ. ಅದೊಂದನ್ನು ಆಗಮಾಡಿಕೊಟ್ಟರೆ ಆಳುವ ದೈವಕ್ಕೆ ನಾವು ಚಿರಋಣಿಗಳು.

ಅದೇನೆಂದರೆ, ಯಾವ ಹಬ್ಬ ಹರಿದಿನವಾಗಲಿ ಮನೆಗೆ ಮಂಗಳ ಅಂತ ಮಾವಿನಸೊಪ್ಪು ತೋರಣ ಕಟ್ಟುವುದು ಅನಾದಿಯಾಗಿ ಬಂದ ರೂಢಿ. ನಾವು ಹಾಗೇ ಆಚರಿಸುತ್ತಿದ್ದೆವು. ಆದರೆ ಈಗ ಏಳೆಂಟು ತಿಂಗಳಿಂದ ನಮಗೆ ಮಾವಿನ ಸೊಪ್ಪೇ ಸಿಗದು. ಪಕ್ಕದಲ್ಲಿದ್ದ ಮಾವಿನ ತೋಪುಗಳೆಲ್ಲಾ ಬೋಳಾಗಿ ನಿಂತಿವೆ. ಹಾಗೇ ಬಾಳೇ ತೋಟವೂ ಬರಿದಾಗಿದೆ. ಹಿರಿಯರ ತಿಥಿ, ಹಬ್ಬದ ಒಬ್ಬಟ್ಟಿಗೆ, ಕಡೆಗೆ ಪಂಡಿತರ ಕಷಾಯಕ್ಕೆ ಅಂದರೂ ಬಾಳೆ ಸಿಗುಲ್ಲ.

ಏಕಪ್ಪಾ ಹೀಗಾಯಿತು ಅನ್ನಬಹುದು. ತೋಟಕ್ಕೆ ಬೇಸಿ ಬಂತೆ, ಅನ್ನಬಹುದು. ಇಲ್ಲಾ! ಇಲ್ಲಾ!! ಆದರೆ ಹಿರಿಯರು ಹೆಚ್ಚಾದಾಗಿನಿಂದ, ನಾಯಕರ ನಂಬರು ಏರಿದ ಮೇಲೆ ದಿನಾಗಲೂ ಅಥವಾ ದಿನ ಬಿಟ್ಟು ದಿನ ನಮ್ಮ ಗ್ರಾಮಕ್ಕೆ ಯಾರಾದರೂ ಮಲೇರಿಯಾ ಬಂದಹಾಗೆ ಬರುತ್ತಲೇ ಇದ್ದಾರೆ. ಅವರ ಸ್ವಾಗತಕ್ಕೆ ಈ ಕುಗ್ರಾಮದಲ್ಲಿ ನಾವೇನು ಮಾಡೇವು? ಇಷ್ಟಾದರೂ ಮಾಡೋಣ ಅಂತ ಹಸಿರುವಾಣಿ ಚಪ್ಪರ, ಬಾಳೇಕಂಬ, ಇಷ್ಟನ್ನು ಮಾಡುತ್ತಿದ್ದೇವೆ. ಉತ್ತರ! ಈ ದಿನದ ಮಾವಿನ ಸೊಪ್ಪನ್ನು ಬೆಂಗಳೂರು ಮಾರ್ಕೆಟಿನಿಂದ ಕೊಂಡು ತಂದೆವು. ಬಾಳೆಕಂಭವನ್ನು ನಂಜನಗೂಡಿನಿಂದ ತರಿಸಿದೆವು. ನಮ್ಮ ಆರ್ಥಿಕ ಸ್ಥಿತಿಯಲ್ಲಿ ಇದು ಮೂರು ವರ್ಷದ ಸಂಪಾದನೆ. ಅಂದಮೇಲೆ ಈ ಸಣ್ಣ ಕೈಂಕರ್ಯವನ್ನು ಕೂಡ ನಾವು ಮಾಡಲಾರದೆ ಹೋದೇವಲ್ಲಾ ಎಂಬ ಚಿಂತೆ ನಮ್ಮನ್ನು ಕೊರೆಯುತ್ತಿದೆ.

ಗ್ರಾಮೋದ್ಧಾರಕ್ಕಾಗಿ ಬಂದ ದೇಶದ ಮಣಿಗಳೇ! ನಮ್ಮ ನಲುವಿನ ನಾಯಕರೇ! ಒಂದೊಂದು ಗ್ರಾಮಕ್ಕೂ ಸಾಕಷ್ಟು ಒಂದೊಂದು ಎಲೆ ಬಿಡುವ ಮಾವಿನ ತೋಟ, ಕಂಭ ಬಿಡುವ ಬಾಳೇತೋಟ ಇವೆರಡನ್ನೂ ಸಾಧಿಸಿ ಕೊಟ್ಟರೆ ನಮ್ಮ ಕೊರತೆ ನೀಗಿದಂತೆಯೇ. ಒಂದೊಂದು ತೋಟಕ್ಕೂ ಈಗಿನ ಖರ್ಚಿನ ಪ್ರಕಾರ ನೂರು ನೂರು ಎಕರೆ ಸಾಗುವಳಿ ಮಾಡಿದರೆ ಸಾಕು ಎಂದು ಅಂದಾಜಾಗಿದೆ. ಇದಕ್ಕೆ ತಗುಲುವ ಗೊಬ್ಬರ, ಬೀಜ, ಉಸ್ತುವಾರಿ ಇಷ್ಟನ್ನು ನಮಗೆ ಘನವಂತರು ದಯಪಾಲಿಸಿದರೆ, ನಾವು ಕೊರತೆ ಇಲ್ಲದೆ ಜೀವನ ನಡೆಸುತ್ತೇವೆ. ಯೋಚನೆಯಿಲ್ಲದೆ ಸೇವೆ ಮಾಡುತ್ತೇವೆ.

ಈ ಸೌಕರ್ಯವನ್ನು ದೇವರು ನಮಗೆ ದಯಪಾಲಿಸಲಿ ಎಂದು ಎಲ್ಲರೂ ಒಕ್ಕೊರಲಿನಿಂದ ನಮ್ಮ ನಾಯಕರನ್ನು ಬೇಡಿಕೊಳ್ಳೋಣ.

ತೋಟಮಸ್ತು. ತುಷ್ಟಿರಸ್ತು. ಶಾಂತಿರಸ್ತು.

* * *

—ಮದಕರಿನಾಯಕ.

[ಹೀಗಾಯ್ತು ಅಂತ ಯಾರೋ ವರದಿಹೇಳಿದರು. ಹೀಗೂ ಹೇಳಿರಬಹುದೇ ಬಹಿರಂಗವಾಗಿ. ಛೇ! ಎಂದಿಗೂ ಇರಲಿಕ್ಕಿಲ್ಲ. ಆದರೆ ವಿಚಿತ್ರಮಯ ಜಗತ್ ಎಂದೇ ಪ್ರಕಟಿಸಿದ್ದೇವೆ. ಸಂ.]

ನಗುವ ನಂದ

ನ

ದೀಪಾವಳಿ ಸಂಚಿಕೆಯು ಹುಡುಗಿಯ ಕೈಲಿ ಪಟಾಕಿ ಕೊಟ್ಟಿದೆ. ಈ ಅಣು ಯುಗದಲ್ಲಿ ಸ್ತ್ರೀಯರೇ ಕ್ರಾಂತಿಗೆ, ಪಟಾಕಿಗೆ, ಟಪಟಪಕ್ಕೆ ಎಂದಿನಂತೆ ಕಾರಣರು. ಅಂದು ದ್ರೌಪದಿ, ಸೀತೆ, ಇಂದು ಸಾಮಾನ್ಯ ಜನರ ಯುಗ ಅಂದ ಮೇಲೆ ಸಾಮಾನ್ಯ ಸ್ತ್ರೀಯರು ಕ್ರಾಂತಿಗೆ ಕಾರಣರು ಎಂದು ಸೂಚಿಸ ಲೋಸುಗವೋ ಏಂಬಂತೆ ತ್ರಿವರ್ಣ ಮುಖಚಿತ್ರ. ಕಸ್ತೂರಿ ಮಾತ್ರೆ—ಬುಳ್ಳನ ಬಡಾಯಿ. ದೀಕ್ಷಿತರ ಭವತಿ ಭಿಕ್ಷಾಂದೇಹಿ. ಇತ್ಯಾದಿ ಎಲ್ಲವೂ ದೀಪಾವಳಿಗೆ ಕಳೆಕೊಟ್ಟಿವೆ.

ಎಂಟು ಆಣೆಗೆ—ಒಂದೇ ಒಂದು ಆನೆ ಪಟಾಕಿ ಸರದ ಬೆಲೆಗೆ ಇಷ್ಟು ಮಾತಿನ ತಾಪು. ಗುರುಗುರು ಬತ್ತಿ. ಕರುಳು ಕಿಚುಕಿ, ಕಚಕುಳಿ ಬಾಣ ಬಿಟ್ಟ ವ್ಯವಸ್ಥಾಪಕ ಮಂಡಲಿಯನ್ನು ಅಭಿನಂದಿಸಲೇ ಬೇಕು. ಯಾರಿಗೂ ಇದರಿಂದ ಕೈ ಸುಡದೆ ಇರುವಂತೆ ಜನತೆ ಕಾಪಾಡಲೇ ಬೇಕು. - "ಕಿಡಿ."

—o—

ಹು ಡು ಗಾ ಟ

ದೀಪಾವಳಿ ಅಂದರೆ ಹುಡುಗ ಹುಡುಗಿಯರಾಟ. ದೊಡ್ಡವರು ಇದರಲ್ಲಿ ಭಾಗವಹಿಸಿದರೆ, ಉತ್ತರ ಭಾರತದಲ್ಲಿ ಅನ್ನುವಂತೆ 'ದಿವಾಳಿ' ಸ್ವತಂತ್ರ ಭಾರತ ದಲ್ಲಿ, ಸ್ವತಂತ್ರ ಮೈಸೂರಿನಲ್ಲಿ ಈ ಸಾರಿ ದೀಪಾವಳಿಯನ್ನು ಆಚರಿಸಲು, ಶ್ರೀಯುತ "ಜಿಬಿಜ್" ಅವರು "ಹುಡುಗಾಟ"ವನ್ನು ಎಲ್ಲರೆದುರಿಗೂ ಆಡಿದ್ದಾರೆ. ಇದರ ಸೊಗಸು ನೋಡಿ! ಹಿರಿಯರೂ ದೊಡ್ಡವರೂ ಇದರಲ್ಲಿ ಭಾಗವಹಿಸಿ ಕಲಕಿ ಕುಲಕಿ ನಗಬಹುದು. ಆದರೂ ದಿವಾಳಿಯಾಗುವ ಸಂಭವವೇ ಇಲ್ಲ. ಇದೇ ನಗೆನಾಗರಿಕೆಯ ತಿರುಳಲ್ಲವೇ?

ಮುಂಬರುವ ದೀಪಾವಳಿಗೆ ಶ್ರೀಯುತ ಜಿಬಿಜ್‌ರವರು "ಹಿರಿಯಾಟ"ದ ಔತಣವನ್ನು ಹಿರಿಯರಿಗೆ ಕನ್ನಡಿ ಹಿಡಿದು ತೋರಿಸುತ್ತಾರೆಂಬ ನಮಗೆ ಪೂರ್ಣ ನಂಬಿಕೆ ಇದೆ.

ಅದಕ್ಕೂ ಈಗಿನದಕ್ಕೂ ಈಗಲೇ ಬೆನ್ನು ತಟ್ಟುವುದು ನ್ಯಾಯವಲ್ಲವೇ?

ಶಾರದಾ ಪ್ರಕಟನಾಲಯದವರು ಕೇವಲ ಒಂದು ಇಪ್ಪತ್ತು ಆಣೆಗೆ ಈ "ಹುಡುಗಾಟ"ವನ್ನು ಆಡುತ್ತಾರೆ. —"ಕಿಡಿ"

"ಇಲಿ ಸಂತೆ"

ಆ ದಿನದ ಪ್ರ. ಪ್ರ. ಸಭೆಯ ಕಾರ್ಯ ಕಲಾಪಗಳನ್ನು ಏಕಾಗ್ರ ಚಿತ್ತತೆ ಯಿಂದ ದೈನ್ಯಂದಿನ ಪತ್ರಿಕೆಯಲ್ಲಿ ಓದುತ್ತಾ ಇದ್ದೆ. ಗುಡಿಸಲ ಮೂಲೆಯಲ್ಲಿ ಏನೋ ಸರಸರ ಅಂದಹಾಗಾಯ್ತು. ಸಾವಿರ ಕಾಲೇ? ಎಂದು ನೋಡಿದೆ. ಮೂಲೇಲಿದ್ದ ಹಳೇ ಪತ್ರಿಕೆಗಳನ್ನೆಲ್ಲಾ ಈ ಕಡೆ ಗುಡ್ಡೆ ಹಾಕಿದೆ. ಅಲ್ಲೊಂದು ಬಿಲ. ಖಾಲಿ ಬಿಲ. ಇನ್ನೇನೂ ಇದ್ದಿಲ್ಲ—ಸರಸರವೆಲ್ಲಾ ಮನಸ್ಸಿನ ಊಹೆ ಇರಬಹುದು, ಅಂತಂದುಕೊಂಡು ತಿರುಗಿ ಹಾಸಿಗೆ ಮೇಲೆ ಕುಳಿತು ದೈನ್ಯಂ ದಿನ ಪತ್ರಿಕೆಯಲ್ಲಿ ಮಗ್ನನಾದೆ.

ತಿರುಗಿ ಅದೇ ಶಬ್ಧ. ತಿರುಗಿ ನೋಡಿದೆ.

ಅಲ್ಲೊಂದು ಇಲಿ. ಸುಂಡಿಲಿ. ಬಿಲದ ಒಳಗಿಂದ ಏನನ್ನೋ ತಂದು ಮುಂದಿಟ್ಟುಕೊಂಡು ತಿನ್ನುತ್ತಾ ಇತ್ತು. ಸುಖವಾಗಿ ಚಪ್ಪರಿಸುತ್ತಾ ಇತ್ತು.

ನನಗೆ ಹೊಟ್ಟೆ ಉರಿ. ಆ ದಿನವೆಲ್ಲಾ ನನಗೆ ಸಿಕ್ಕಿದ್ದು ಅರೆಕಾಸಿನ ಮಜ್ಜಿಗೆ. ಈ ಸುಂಡಿಲಿ! ನಮ್ಮ ದೇಶದಲ್ಲಿ! ನನ್ನ ಮನೆಯಲ್ಲಿ!! ಸಾವಧಾನ ವಾಗಿ ಹೊಟ್ಟೆತುಂಬಿಸಿಕೊಳ್ಳುತ್ತಿದೆಯಲ್ಲಾ ಅಂತ ಕೋಪ. ಹಿಡಿದಿದ್ದ ಪತ್ರಿಕೆ ಯನ್ನ ಸುರುಳಿಮಾಡಿ ಆ ಕಡೆ ಗುರಿಯಿಟ್ಟು ಎಸೆದೆ. ಇಲಿ ಪರಾರಿ! ನಾನೂ ಅಲ್ಲಿಗೆ ಹೆಜ್ಜೆ ಹಾಕಿದೆ. ಅದೇನು ತಿನ್ನುತ್ತಿತ್ತು ಗೊತ್ತೆ. ಅಕ್ಕಿ! ಕಲ್ಲಿಲ್ಲದ ಅಕ್ಕಿ!! ಬಿಲದ ಬಾಯಿಂದ ಒಂದು 'ಅಡಿ ಪೇಪರ್ ಛೇಸ್ ಆಡಿದ ಹಾಗೆ ಅಕ್ಕೀಕಾಳು.

ಲೇ! ಅಂದೆ. ಲೇ! ಉತ್ತರ ಕೊಡಲಿಲ್ಲ. ಗೊರಕೆ ಮಾತ್ರ ಹುಯ್ದಳು.

ನಾನೇ ಎದ್ದು ಹೋಗಿ ಒಂದು ಸೌಟು ತಂದೆ. ಬಿಲಕ್ಕೆ ಹಾಕಿದೆ. ಹೊರಕ್ಕೆ ತೆಗೆದೆ. ಒಂದು ಸೌಟು ಅಕ್ಕಿ. ಬೇಗ ಹೋಗಿ ಒಂದು ಪುಸ್ತಕದ ಚೀಲ ತಂದೆ. ಸೌಟು ಸೌಟಾಗಿ ಆ ಚೀಲ ತುಂಬಿದೆ. ಬಿಲ ಅಕ್ಷಯವಾದ ಹಾಗೆ ಕಾಣಿಸಿತು. ಒಂದೇ ದಿನ ಮುಗಿಸಬಾರದು. ಅನ್ನಪೂರ್ಣೆ ಒಲಿದಾಗ ತುಂಬಾ ಆಶೆ ಪಡಬಾರದು. ಅತಿಯಾಸೆ ಅಕ್ಕಿ ಕೆಡಿಸೀತು! ಅಂತ ಆ ಪುಸ್ತಕದ ಚೀಲ ತುಂಬಿ ಬಿಲದ ಮೇಲೆ ಪತ್ರಿಕೆ ಮುಚ್ಚಿದೆ.

ನಾಳೆ! ನನ್ನ ಗೃಹಿಣಿ. ಇವತ್ತೇನು ಅಡಿಗೆ ಮಾಡಲಿ. ಗೋರಿಕಾಯಿ ಉಸುಲೀನೆ, ಗೆಣಸಿನ ರೊಟ್ಟೀನೇ ಅಂದಾಗ ಠೀವಿಯಿಂದ, ಹೆಮ್ಮೆಯಿಂದ, ಈ ಚೀಲ ಅಕ್ಕಿ ಅವಳೆದುರಿಗೆ ಚೆಲ್ಲಿ "ಎಲೆ! ಇವತ್ತು ಅನ್ನ ಮಾಡು! ಚಿತ್ರಾನ್ನ ಮಾಡು! ಜ್ಞಾಪಕ ಇದೆಯೇ ಅನ್ನ ಮಾಡೋದು? ಅಥವಾ ಮರೆತೇ ಬಿಟ್ಟಿದೀಯಾ? ಚಿತ್ರಾನ್ನಕ್ಕೆ ಏನೇನು ಚಿತ್ರ ಹಾಕಬೇಕು ನೆನಪಿದೆಯೇ? ಅಥವಾ ಒಂದು ಪಾಕಶಾಸ್ತ್ರದ ಪುಸ್ತಕ ಕೊಂಡು ತರಲೇ? ಎಂದು ಕೇಳಬೇಕು. ಅವಳು ಯಾವಾಗಲೂ ವಾಚಾಳಿ. ಆದರೆ ಈ ಅಕ್ಕಿಯ ಮುಂದೆ ಅವಾಕ್ಕಾಗಿ ಕಣ್ಣು ಕಣ್ಣು ಬಿಡುತ್ತ, ಬಾಯಿ ಬಾಯಿ ಬಿಡುತ್ತ ನಿಲ್ಲುತ್ತಾಳೆ.

ಎಲ್ಲಿಂದ ಸಂಪಾದಿಸಿದಿರಿ? ಹೇಗೆ ಸಂಪಾದಿಸಿದಿರಿ? ಎಂದು ಕಡೆಗೆ ಕೃತಜ್ಞತಾ ಪೂರ್ವಕವಾಗಿ ಕೇಳುತ್ತಾಳೆ. ಪ್ರೇಮ ನಯನಗಳಿಂದ ಮೆಚ್ಚುಗೆಯನ್ನು ಹೊರಸೂಸುತ್ತಾ!

ಆಗ ನಾನು ಹೇಳುತ್ತೇನೆ. "ಎಲೌ! ಅರ್ಧಾಂಗಿ! ನನ್ನ ಪತ್ರಿಕೋದ್ಯಮಕ್ಕೆ ಮೆಚ್ಚಿ ಅನ್ನಪೂರ್ಣೆ, ಸದಾಪೂರ್ಣೆ, ಶಂಕರ ಪ್ರಾಣವಲ್ಲಭೆ, ಅಕ್ಷಯ ಅಕ್ಕಿಯ ಮಾರ್ಗ ತೋರಿಸಿದ್ದಾಳೆ. ಇನ್ನು ಮೇಲೆ ಸಾಯುವ ತನಕ ಬರೀ ಅನ್ನ ತಿನ್ನೋಣ. ಊರಲ್ಲಿ ಕ್ಷಾಮವಿರಲಿ, ನಮ್ಮ ಮನೆ ಕ್ಷೇಮ.

ಹೀಗೆಲ್ಲಾ ಅಂದು ಕೊಂಡು ಮಲಗಿದೆ.

ಹಿಂದಿನ ರಾತ್ರಿ ನೆನೆಸಿದಂತೆಯೇ ಮಾರನೆ ಬೆಳಗ್ಗೆ ಆಯಿತು. ಚಾಚೂ ತಪ್ಪದೆ ಆಯಿತು. ನನ್ನ ಹೆಂಡತಿಯ ಕಣ್ಣಿನಲ್ಲಿ ನಾನೊಬ್ಬ "ಜಾದೂ" ಪುರುಷ.

ಆ ರಾತ್ರಿ ಅವಳು ಮಲಗಿ ಗೊರಕೆಗೆ ಪ್ರಾರಂಭಮಾಡಿದ ಕೂಡಲೇ ಪತ್ರಿಕೆಗಳನ್ನು ತೆಗೆದಿಟ್ಟೆ. ಬಿಲಕ್ಕೆ ಸೌಟು ಹಾಕಿದೆ. ಸೌಟು ತುಂಬಾ ಅಕ್ಕಿ. ಇನ್ನೊಂದು ಚೀಲ ತುಂಬಿದೆ.

ನಿಷ್ಕಳಂಕ ಮನಸ್ಸಿನಿಂದ ಮಗುವಿನಂತೆ ನಿದ್ರೆಹೋದೆ. ಅಂದು ಅಲೀ ಬಾಬ "ಓಪನ್ ಸೆಸಿಮಿ" ಅಂದ ಹಾಗೆ ಇಂದು ಪತ್ರಿಕೆ ತೆಗೆದು ಬಿಲಕ್ಕೆ ಸೌಟು ಕಾಣಿಸಿದರೆ ಅಕ್ಕಿ ಸಿಗುವುದಾದರೆ ನಿದ್ರೆ ಬರದೇ ಇರುತ್ತ್ಯೇ ಹೊಟ್ಟೆ ಬಿರಿಯ ತಿಂದ ಮೇಲೆ?

ಈ ರೀತಿ ಒಂದು ಪಕ್ಷ ಸುಖಜೀವನ ನಡೆಯಿತು. "ತಂಡುಲ್ಯೈರ್ ಘೋಷ್ಯೈ?" ಎಂದು ಹೇಳಿ ಹವನ, ಹೋಮಗಳನ್ನು ಮಾಡಿದೆ. ದೇವಿಗೆ ಸ್ವಲ್ಪ ಲಂಚ ಇರಲಿ ಅಂತ.

ಈ ಒಂದು ಪಕ್ಷದಲ್ಲಿ ನಮ್ಮ ಖರ್ಚು ಕಳೆದು ಇನ್ನೂ ಇಪ್ಪತ್ತು ಸೇರು ಅಕ್ಕಿ ಜಮಾ ಆಗಿತ್ತು. ಆಗ ನನ್ನ ಹೆಂಡತಿ ಕುಶಾಗ್ರ ಬುದ್ಧಿಯುವಳು ಹೇಳಿದಳು.—"ಅಲ್ಲಾ ಅಂದ್ರೆ! ಈ ಹೆಚ್ಚು ಅಕ್ಕೀನ ಪಕ್ಕದ ಮನೆ ಪಾರ್ವತಮ್ಮನಿಗೆ ಕೊಡೋಣ. ಸೇರಿಗೆ ಎರಡು ರೂಪಾಯಿ ಕೊಡುತ್ತಾರಂತೆ. ಒಂದು ರೇಷ್ಮೆ ಸೀರೆ ಉಡೋಣ ಹಬ್ಬಕ್ಕೆ ಅಂತ ಆಶೆಯಾಗುತ್ತೆ ಅಂದಳು. ನನಗೂ ಕೆಟ್ಟ ಬುದ್ಧಿ. ಅವಳು ಮದುವೇಲಿ ರೇಷ್ಮೆ ಸೀರೆ ಉಟ್ಟಿದದ್ದು. ಬಲು ಚೆನ್ನಾಗಿದ್ದಳು. ನನ್ನ ಮನೆಗೆ ಬಂದ ಮೇಲೆ ಈ ಬಿಳೀ ನೂಲಿನ ಸೀರೇನೇ ಗತಿ—ದಿನಾಗಲೂ ಈ ಸೂಲಗಿತ್ತಿ ಉಡುಪೇ ನೋಡಿ ನೋಡಿ ಬೇಜಾರಾಗಿತ್ತು. ಹ್ದೂಗುಟ್ಟಿದೆ.

ಇನ್ನೂ ಹದಿನೈದು ದಿನ ರೇಷ್ಮೆ ಸೀರೆ ಉಟ್ಟು ಮಾಡಿದ ವಿಚಿತ್ರಾನ್ನಗಳ ಹಬ್ಬ.

ಆ ವೇಳೆಗೆ ಇನ್ನೂ ಇಪ್ಪತ್ತೈದು ಸೇರು ಅಕ್ಕಿ ಜಮಾ ಆಗಿತ್ತು. "ಲೇ, ಅಂದೆ. ಈ ಸಾರಿ ನಾನೊಂದು ಫಿನ್ಲೆ ಪಂಚೆ ಕೊಂಡುಕೊಳ್ಳುತ್ತೇನೆ" ಅಂದೆ. ಅವಳಿಗೂ ಈ ಖದ್ದರ್ ತುಂಡು ನೋಡಿ ಬೇಜಾರಾಗಿತ್ತು ಅಂತ ಕಾಣುತ್ತೆ. ಹ್ದೂ ಅಂದಳು. ಅಷ್ಟು ಅನ್ಯೋನ್ಯ ನಾವು. ಹೊಟ್ಟೆ ತುಂಬಿದ ಮೇಲೆ.

ನಾನೂ ಫಿನ್ಲೆ ಪಂಚೆ ಕೊಂಡುಕೊಂಡೆ.

ಇಬ್ಬರೂ ಮೆರೆಯಬೇಕೆಂಬ ಆಸೆ. ಸಾಯಂಕಾಲ ದೇವಸ್ಥಾನಕ್ಕೆ ಹರಿಕಥೆ ಕೇಳಲು ಹೋದೆವು.

ಅಲ್ಲಿಗೆ ಬಂದಿದ್ದ ಆಹಾರ ಇಲಾಖಾಧಿಕಾರಿ ನಮ್ಮ ವಸ್ತ್ರಗಳನ್ನು ನೋಡಿದ. ನಮ್ಮ ಹೊಟ್ಟೆಗಳಿಗೆ ದೃಷ್ಟಿ ಬೀಳುವ ಹಾಗೆ ನೋಡಿದ. ನಮ್ಮ ಸಂತೃಪ್ತಿಯ ಮುಖಗಳನ್ನು ಈಕ್ಷಿಸಿದ. "ಎಲಾ! ಅಂದುಕೊಂಡ. ಈ ಕೊಂಪೆಯಲ್ಲಿ ನಾನು ಆಹಾರ ಸರಬರಾಜು ಮಾಡುವ ಈ ಕೊಂಪೆಯಲ್ಲಿ ನನಗೇ ಇಲ್ಲದ ಸಂತೃಪ್ತಿ ಇವರ ಮುಖದ ಮೇಲೆ ಹೇಗೆ ಬಂತು? ಏಕೆ ಬಂತು? ಎಂದು ಯೋಚಿಸತೊಡಗಿದ. ಅಲ್ಲಿ ನೆರೆದಿದ್ದ ಜನಸ್ತೋಮದಲ್ಲೇ ಇಂತಹಾ ಸುಖ ಮುಖದ್ವಯ ಅವನಿಗೆ ಕಾಣಿಸಿತ್ತಿಲ್ಲ. "ಇದರ ಮರ್ಮ ಕಂಡು ಹಿಡಿದೇ ಹಿಡಿಯುತ್ತೇನೆ" ಎಂದು ಶಪಥಮಾಡಿದ.

ಇದೆಲ್ಲವೂ ಅವನ ಮುಖ ಭಂಗಿಯಿಂದಲೇ ನನಗೆ ತಿಳಿಯಿತು. ಹೊಟ್ಟೆ ತುಂಬಿದರೆ. ಅದೂ ಅಭ್ಯಾಸವಿಲ್ಲದ ಹೊಟ್ಟೆ ತುಂಬಿದರೆ. ಜ್ಞಾನಚಕ್ಷುಗಳೇ ನೋಡಲಾರಂಭಿಸುತ್ತವೆ ಅಲ್ಲವೇ?

ಆಹಾರಾಧಿಕಾರಿ ತನಿಖೆಗೆ ಪ್ರಾರಂಭಿಸಿದ. ಮೊದಲು ನಾವು ಎಲ್ಲಿ ಅಕ್ಕಿ ಕೊಳ್ಳುತ್ತೇವೆ ಎಂದು ಹುಡುಕಿದ. ಅಲ್ಲಿ ಏನೂ ಸಿಗಲಿಲ್ಲ. ನಮ್ಮ ಮನೆಗೆ ಹೋಗಿ ಬರುವವರನ್ನೆಲ್ಲಾ ತಲಾಷ್ ಮಾಡಿದ. ಏನೂ ಪತ್ತೆಯಾಗಲಿಲ್ಲ. ನಾನು ಹೋಗಿಬರುವ ಸ್ಥಳಗಳನ್ನೆಲ್ಲಾ ಗುರ್ತಿಟ್ಟ. ಅಲ್ಲೂ ಏನೂ ಗೊತ್ತಾಗಲಿಲ್ಲ. ಆಹಾರ ದಾಸ್ತಾನು ಮಾಡುವ ಸ್ಥಳಗಳನ್ನೆಲ್ಲಾ ಹುಡುಕಲಾರಂಭಿಸಿದ.

ಅನ್ನಪೂರ್ಣೆ ಒಲಿದಿರುವಾಗ ನಾವ್ಯಾಕೆ ಕಾತುರ ಪಡಬೇಕು? ನಗುನಗುತಾನೇ ಇದ್ದೆವು.

ದಾಸ್ತಾನು ಮಾಡುವ ಸ್ಥಳಗಳ ಪರೀಕ್ಷೆ ಮಾಡಿದಾಗಲೇ ಗೊತ್ತಾಗಿದ್ದು. ನಮ್ಮ ಗುಡಿಸಿಲಿನ ಪಕ್ಕದ ಗಡಂಗೂ ಒಂದು ಆಹಾರ ಶೇಖರಣೆಯ ಸ್ಥಳವೆಂದು ಅಲ್ಲಿ ತನಿಖೆ ಮಾಡಿದಾಗ ಎರಡು ಮೂಟೆ ಅಕ್ಕಿ ಲೆಕ್ಕ ಸಿಗಲಿಲ್ಲವಂತೆ. ಆಗಲೇ ನಮ್ಮನೆಗೆ ಶೋಧಕ ಸಮಿತಿಯವರು ನುಗ್ಗಿದ್ದು. "ಎಲ್ಲೋ ಕನ್ನಹಾಕಿ ಗಡಂಗಿನಿಂದ ಅಕ್ಕಿ ಕದಿಯುತ್ತಿದ್ದೀರಿ" ಎಂದು ಅವರ ಆಪಾದನೆ. ಸದ್ಯ! ಪತ್ರಿಕೆಗಳು ಬಿಲವನ್ನು ಪೂರ್ಣ ಮುಚ್ಚಿದ್ದುವು.


ಸಮಾನ ಗೋಡೆಗಳನ್ನೆಲ್ಲಾ ಪರೀಕ್ಷಿಸಿದರು. ಏನೂ ಪತ್ತೆ ಆಗಲಿಲ್ಲ. ಪೆಚ್ಚು ಮುಖ ಹಾಕಿಕೊಂಡು ಹೊರಟುಹೋದರು.

ಸುಭಿಕ್ಷ ಕಾಲ ಊರಿಗೆ ಬಂದಾಗ ಹೀಗಾಯ್ತು ಅಂತ ನಾನು ಹೇಳಿದರೆ ಯಾರೂ ನಂಬಲಿಲ್ಲ. ಗೊತ್ತಯ್ಯಾ ಇಲಿಯಂತೆ ಇಲಿ--ಎರಡು ಕಾಲಿನ ಇಲಿ. ಆ ಇಲಿಗೆ ಕಾಳಸಂತೆ ಗೊತ್ತಿತ್ತೇನೋ! ಆ ಇಲಿಯ ಹೆಸರೇನೋ! ಎಂದು ಹಾಸ್ಯ ಮಾಡಿದರು. ನೀವೂ ನಂಬುಲ್ಲವೇ?

—ಶಿವು.

ಪಂ|| ನೆಹ್ರೂ ಅವರ ಅಮೇರಿಕಾದ ಪ್ರವಾಸ—ಶುದ್ಧ ಸೌಹಾರ್ದಕ್ಕಾಗಿ ಮಾತ್ರ ಎಂದು ಒತ್ತಿ ಒತ್ತಿ ಹೇಳಲಾಗಿದೆ.

—ಅಮಲ್ದಾರನ ಮಗಳ ಮದುವೆಯಲ್ಲಿ ಶೇಕದಾರನು ಶುದ್ಧ ಸೌಹಾರ್ದಕ್ಕಾಗಿ ಉಡುಗೊರೆ ಕೊಟ್ಟಹಾಗೇ? ಎಂದು ರಷ್ಯನ್ ಪತ್ರಿಕೆಗಳು ಇನ್ನೂ ಹೇಳಿಲ್ಲವಂತೆ.



VITOFERRIN

TRADE MARK

ಶ್ರೇಷ್ಠತೆಯ ಹೆಗ್ಗುರುತು

—ವೈಟೋಫೆರಿನ್—

(ಆಧುನಿಕ ಶಕ್ತಿವರ್ಧಕ ಟಾನಿಕ್)

★ ಇದರಲ್ಲಿ "ಎ", "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತ ಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ. ★

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ, ಲಿಮಿಟೆಡ್

ಮಲ್ಲೇಶ್ವರಂ : : ಬೆಂಗಳೂರು 3.



'ಸ್ತ್ರೀಯರಿಗೆ' ಮುಖ್ಯವಾದ 'ಸೌಂದರ್ಯ'ವೆಂದರೆ ಶರೀರ ನೈರ್ಮಲ್ಯ. "ಋತು" ದೋಷವು ಶರೀರವನ್ನು ನಿರ್ಮಲವಾಗಿಟ್ಟಿರುವುದಿಲ್ಲ. ಈ ದೋಷ ನಿವಾರಣೆ ಯಿಂದಲೇ ಆರೋಗ್ಯಭಾಗ್ಯ ಮತ್ತು ಸೌಂದರ್ಯಲಾಭ. 'ಅರುಣ' ಈ ಎರಡು ಸಂಪತ್ತನ್ನೂ ಕೊಡುತ್ತದೆ. ಐವತ್ತುವರುಷಗಳ ಅನುಭವವನ್ನು ಪಡೆದು ಆರೋಗ್ಯಭಾಗ್ಯವನ್ನುಂಟು ಮಾಡುವ ಸಿದ್ಧೌಷಧ 'ಅರುಣ'



ಆಯುರ್ವೇದಾಶ್ರಮಂ, ಲಿಮಿಟೆಡ್
(ಸ್ಥಾಪಿತ 1899)
ಮದ್ರಾಸು. 17

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಬಿಡಿ ಪ್ರತಿ ಕೇವಲ ನಾಲ್ಕಾಣೆ

ವಾರ್ಷಿಕ ಚಂದಾ : 3 ರೂ.ಗಳು (ಅಂಚೆ ವೆಚ್ಚ ಸಹಿತ)

ನಮ್ಮ ಮಾರಾಟಗಾರರು

ಶ್ರೀ ಕೃಷ್ಣ ಬ್ರದರ್ಸ್	- ಚೆನ್ನರಾಯಪಟ್ಟಣ
,, ಕರ್ಣಾಟಕ ಮಾಡರ್ನ್ ಅಡ್ವರ್‌ಟೈಜಿಂಗ್ ಸರ್ವಿಸ್	- ಚೆಳ್ಳಕೆರೆ
,, ಮಲನಾಡು ಸ್ಟೋರ್ಸ್	- ಶೃಂಗೇರಿ
,, ಯಸ್. ನರಸಿಂಹಮೂರ್ತಿ	- ಚಿಕ್ಕಮಗಳೂರು
,, ಪದ್ಮನಾಭ ಶೆಣೈ	- ಉಡುಪಿ ದ. ಕ.
,, ಯಸ್ ಯನ್. ರಂಗಪ್ಪಶೆಟ್ಟಿ	- ಬೇಲೂರು
,, ರಾಮಸಂಜೀವಯ್ಯಶೆಟ್ಟಿ	- ಕುಣಿಗಲ್
,, ಜಿ. ವಿ. ಶಿವರಾಮಯ್ಯ	- ಗುಂಡ್ಲಪೇಟೆ
,, ಬಿ. ಯಸ್. ಸತ್ಯನಾರಾಯಣಶೆಟ್ಟಿ	- ನೆಲಮಂಗಲ
,, ಯಂ. ಯಸ್. ಶ್ರೀನಿವಾಸಯ್ಯ	- ಮಳವಳ್ಳಿ
,, ಸುಬ್ಬರಾಯಶಾಸ್ತ್ರಿ	- ಬೊಂಬಾಯಿ
,, ಡಿ. ಶ್ರೀನಿವಾಸಯ್ಯಂಗಾರ್	- ಕೊಳ್ಳೆಗಾಲ
,, ಎ. ಯಂ. ಸೀತಾರಾಮಯ್ಯ	- ಅರಕಲಗೂಡು
,, ಹೆಚ್. ಯಂ. ಶಿವಲಿಂಗಯ್ಯ	- ಹೊಸಕೋಟೆ
,, ಶಂಕರ ನಾರಾಯಣಮಯ್ಯ	- ಪುತ್ತೂರು ದ. ಕ.
,, ಶ್ರೀನಿವಾಸ ಬುಕ್ ಸ್ಟಾಲ್	- ಮಧುಗಿರಿ
,, ಐಯ್ಯರ್ ಬ್ರದರ್ಸ್	- ಹುಣಸೂರು
,, ಶಾಸ್ತ್ರಿ ಬ್ರದರ್ಸ್	- ಟಿ. ನರಸೀಪುರ
,, ಎಲ್ ಆರ್. ಸುಬ್ರಮಣ್ಯಐಯ್ಯರ್	- ಲಂಕ ಬೆನಾರೀಸ
,, ಶಿರಗೊಂಕರ್ ಬ್ರದರ್ಸ್	- ಗೋಕಾಕ್
,, ವಾಸುದೇವಶೆಣೈ	- ತೀರ್ಥಹಳ್ಳಿ
,, ಕೆ. ಯಂ. ವೀರೇಶ್ವರಯ್ಯ	- ಜಗಳೂರು
,, ವೆಂಕಟಕೃಷ್ಣಭಟ್ಟ	- ಹರಿಹರಪುರ
,, ಜೆ ರಂಗಯ್ಯ	- ಶಿರ
,, ಬಿ. ಪಿ. ಯಸ್. ರಾವ್	- ಕಲ್ಕತ್ತ
,, ಮಂಜರಾಬಾದ್ ಸ್ಟೋರ್ಸ್	- ಸಕಲೇಶಪುರ
,, ಜೈಹಿಂದ್ ನ್ಯೂಸ್ ಏಜೆನ್ಸಿ	- ಸೊರಬ
,, ಆರ್. ವಿ. ರುದ್ರಯ್ಯ ಅಂಡ್ ಬ್ರದರ್ಸ್	- ಹಿರಿಯೂರು
,, ಕರ್ಣಾಟಕ ಮ್ಯೂಸಿಕ್ ಹೌಸ್	- ಸಿಕಂದರಾಬಾದ್
,, ರಾಮಯ್ಯ	- ಕೆಂಗೇರಿ

———— o ————


Toilet Soap
ಮಗುವಿಗೆ ಆರೋಗ್ಯ
ಕೊಡುವ
ಈ ಸಾಬೂನೇ ಬೇಕು?
ಮೈಸೂರು ಸ್ಯಾಂಡಲ್
ಸಾಬೂನಿನಿಂದ ಬರುವ ಹೇರಳವಾದ
ನೊರೆಯು ಚರ್ಮವನ್ನು ಬಹು ಬೇಗ ಚೊಕ್ಕಟಪಡಿಸುತ್ತದೆ.......................
ರಂಧ್ರಗಳಲ್ಲಿ ಕೊಳೆ ಇಲ್ಲದಂತೆ ಮಾಡುತ್ತೆ. ಚರ್ಮಕ್ಕೆ ಆಹಾರದಂತಿರುವ
ಈ ಆರೋಗ್ಯಕರವಾದ ಸಾಬೂನನ್ನೇ ಯಾವಾಗಲೂ ಉಪಯೋಗಿಸಿ.
ಎಲ್ಲೆಲ್ಲಿಯೂ ದೊರೆಯುತ್ತದೆ.
ಮೈಸೂರು ಸ್ಯಾಂಡಲ್ ಸೋಪ್

ದೀಪಾವಳಿ ಹಬ್ಬಕ್ಕೆ ದೇದೀಪ್ಯಮಾನ ಕಾಣಿಕೆ!

21-10-49 ರಿಂದ ಪ್ರತಿ ದಿನ 3 ಆಟಗಳು

ಬೆಂಗಳೂರು ಶಾರದ—ಕೆಂಪೇಗೌಡ—ಲಕ್ಷ್ಮಿ
ಟಾಕೀಸುಗಳಲ್ಲಿ

ಮತ್ತು , ಕೆ. ಜಿ. ಎಫ್. — 'ಗೇ' ಟಾಕೀಸ್‌ನಲ್ಲಿ

ಶೀಘ್ರದಲ್ಲಿಯೇ ಮೈಸೂರು 'ನ್ಯೂ ಅಪೇರಾ' ದಲ್ಲಿ

ಆರ್. ಕೆ. ಯವರ ಅನೋಘ ಚಿತ್ರ

ದೇವ ಮನೋಹರಿ

(ತಮಿಳು)



DEVAMANOHARI

(TAMIL)

ತಾರಾಗಣ :

ಹೊನ್ನಪ್ಪ ಭಾಗವತರ್,
ಭಾನುಮತಿ,
ಬಿ. ಎಸ್. ಸರೋಜ.
ಕಾಳಿ N ರತ್ನಂ,


★

ಲಲಿತ–ಪದ್ಮಿನಿ, ರಾಗಿನಿ "ಗುಲೇಬಕಾವಳಿ" ನೃತ್ಯ ನಾಟಕದಲ್ಲಿ
ಹಿನ್ನಲೆ ಸಂಗೀತ: ಗಾನಸರಸ್ವತಿ ಮತ್ತು M. L. ವಸಂತ ಕುಮಾರಿ.

—o—

JAYAMANI PICTURES RELEASE.

ಶಾಲಿಮಾರ್ ಸಾಮಗ್ರಿಗಳು ಬೇಕೆಂದು ಬರೆಯುವಾಗ ಅವು ಯಾವ ಕೆಲಸಕ್ಕೆಂದು ಸ್ಪಷ್ಟವಾಗಿ ತಿಳಿಸಿರಿ.



ಆಕರ್ಷಣೀಯವಾದ ಚಿರಕಾಲ ಬಾಳುವ

ಪೆಯಿಂಟ್ ಫಿನಿಷ್

ಪ್ರಕಾಶಮಾನವಾದ ಎನಾಮೆಲ್ ಬಣ್ಣದಂತೆ ಕಾಣುವ **ಶಾಲಿಮಾರ್ ವುಡ್‌ಕೋಟ್** ತಯಾರಾಗಿ ಮಿಶ್ರಣ ಮಾಡಿಟ್ಟ, ಸಮಾಪ್ತಿಯಲ್ಲಿ ಹಚ್ಚುವ, ಚಿರಕಾಲ ಬಾಳುವ ಬಣ್ಣವಾಗಿದೆ. ಎಲ್ಲಾ ಬಗೆಯ ಮರಗೆಲಸಗಳಿಗೂ ಆದರ್ಶಪ್ರಾಯವಾಗಿ, ಒಳಗೂ ಹೊರಗೂ ಹಚ್ಚಲು ಯೋಗ್ಯವಾಗಿ, 32 ಬಗೆಯ ಪ್ರಮಾಣ ಛಾಯಾ ಭೇದಗಳಲ್ಲಿ ತಯಾರಿಸಲಾಗಿದೆ


ಸ್ಪಷ್ಟವಾಗಿ ಹೇಳಿರಿ... ಶಾಲಿಮಾರ್ ವುಡ್‌ಕೋಟ್

ಮರಗೆಲಸಗಳಿಗೆ ಸಮಾಪ್ತಿಯಲ್ಲಿ ಹಚ್ಚುವ ಬಣ್ಣ

SHALIMAR PAINT, COLOUR & VARNISH CO., LTD.,

Post Box 136, Madras 1

REG. NO. M. 4718 KORAVANJI, NOV. 1949



Printed by B S Iyengar Bangalore City
Publisher—B N. Gupta, Editor—M Shivaram